


PREUNIVERSITY MATHEMATICS

ಪ್ರೀಯುನಿವರ್ಸಿಟಿ ಗಣಿತಶಾಸ್ತ್ರ



$$A \cup B = \{x \mid x \in A \text{ or } x \in B\}$$

PART I
ಭಾಗ 1

ALGEBRA AND ELEMENTARY CALCULUS
ಬೀಜಗಣಿತ ಮತ್ತು ಸುಲಭ ಕಲನಶಾಸ್ತ್ರ

A BANGALORE UNIVERSITY PUBLICATION

PREUNIVERSITY MATHEMATICS

ಪ್ರೀಯುನಿವರ್ಸಿಟಿ ಗಣಿತಶಾಸ್ತ್ರ

PART I

ALGEBRA AND ELEMENTARY CALCULUS

ಭಾಗ 1

ಬೀಜಗಣಿತ ಮತ್ತು ಸುಲಭ ಕಲನಶಾಸ್ತ್ರ

A BANGALORE UNIVERSITY PUBLICATION

BANGALORE UNIVERSITY

MATHEMATICS TEXT BOOK COMMITTEE

PROF. F. J. NORONHA (*Chairman*)
DR C. N. SRINIVASIENGAR
SRI G. T. NARAYANA RAO
SRI D. V. RAMANNA
SRI K. R. SRIKANTIAH
SRI D. S. CHANDRASEKHARIAH

Price: Rs 4

FOREWORD

A Committee for Kannada Textbooks has been set up by this University to prepare textbooks for courses of study in Arts, Science and Commerce, since there is a persistent need experienced by quite a few students to study the various subjects in the regional language. This book on Algebra and Elementary Calculus is the first in the series to be published by the University. It is expected that many more will follow. The University is grateful to Prof. F. J. Noronha and his colleagues for having prepared this book. It is easy to have a textbook in Mathematics both in English and in the regional language. This may not necessarily be the pattern for books on other subjects. This bilingual production is, however expected to serve a useful purpose.

Bangalore University,
Bangalore,
Dated 1st December 1967

V. K. GOKAK,
Vice-Chancellor

PREFACE

This book has been written to meet the requirements of the new syllabus in Mathematics for the Preuniversity Course as recommended by the Mathematics Reforms Committee of the University Grants Commission 1966. This syllabus, with slight modifications, has been approved by the Boards of Studies in Mathematics of the Mysore, Karnatak and Bangalore Universities.

This text book is published in two parts. Part I consists of Algebra and Elementary Calculus while Part II comprises Geometry and Trigonometry. Important new topics included are: Elementary Set Theory, Number Systems, Determinants, Elements of Differential Calculus and Analytical Geometry. These will provide a stronger mathematical background for students proceeding to Degree Courses in Mathematics, Physics and Engineering

A special feature of this book is the simultaneous presentation of the subject matter in English and Kannada. At each page the student has ready access to both English and Kannada versions of the same topic. This, we believe, will be of great help to the vast majority of the students of the Mysore State whose mother tongue is Kannada. It is found by experience that by reading the subject in both languages they will grasp more easily the new mathematical concepts.

The text has been prepared by a Committee appointed by the Bangalore University. The members of the Committee are grateful to the Vice Chancellor, *Padmashri* Dr V. K. Gokak and the University Authorities for their approval and support in this venture. We also thank Dr R. S. Mugali, Chairman of the Kannada Textbook Committee, for initially sponsoring the proposal.

I take this opportunity to thank Sri M. A. Srirama, Director, Sri B. N. Ramamurthy, Senior Deputy Director, and all concerned in the Government Press for the speed and efficiency with which

they have produced this book. The diagrams were drawn by Sri K. N. Gopala Rao of the Department of Civil Engineering, University College of Engineering.

I also wish to express my sincere gratitude to my colleagues on the Committee for their enthusiastic cooperation in the arduous work of preparing the text in both languages. I particularly thank Dr C. N. Srinivasiengar, Retired Professor of Mathematics, who read every word of the manuscript and offered valuable suggestions. Sri G. T. Narayana Rao, in addition to writing parts of the text, played a major role in reading the proofs and assisting the Press. Sriyuths D. V. Ramanna, K. R. Srikantiah and D. S. Chandrasekhariah made valuable contributions in both English and Kannada.

I conclude with best wishes to all the young students of the Preuniversity Course who will be using this text book. I hope that their interest in the New Mathematics will be greatly stimulated by the bilingual presentation of the subject in this Bangalore University Publication.

F. J. NORONHA,
Chairman,
Mathematics Text Book Committee,
Bangalore University

CENTRAL COLLEGE,
BANGALORE,
1st March 1968

CONTENTS -- ವಿಷಯಸೂಚಿ

ALGEBRA

ಬೀಜಗಣಿತ

CHAPTER 1

Elementary Theory of Sets

1.1 Definition of a set—The idea of a set is quite simple and common. A set is a collection of objects of any kind which are grouped together because of some property which they have in common.

Here are some familiar examples of sets :—

A : The set of students in your class

B : The set of teachers in your College

C : The set of books in your College library

D : The inhabitants of your town

E : The States in India

F : The set of numbers $\{0, 1, 2, 3, 4, 5, 6, 7, 8, 9\}$

N : The set of counting numbers $\{1, 2, 3, \ldots\}$

I : The set of integers $\{\ldots -3, -2, -1, 0, 1, 2, 3, \ldots\}$

The last two sets are very important in mathematics and will be referred to often in the next chapter. Unless otherwise stated, N will denote the set of counting numbers, or natural numbers, and I will denote the set of integers.

1.2 Elements—A set is determined only when we know definitely which objects it contains. There must be no ambiguity or doubt in the definition. For example the statement : "The set of tall boys in the class" does not define a set in the mathematical sense, for there will always be some doubt as to which boys are to be considered tall !

ಅಧ್ಯಾಯ 1

ಸುಲಭ ಗಣ ಸಿದ್ಧಾಂತ

1·1 ಗಣ ಎಂದರೇನು ?

ಗಣ ಎಂಬ ಭಾವನೆ ಅತಿ ಸುಲಭವೂ ಸಾಮಾನ್ಯವೂ ಆಗಿದೆ. ಸಾಮಾನ್ಯ ಗುಣ ವಿರುವ ವಸ್ತುಗಳ ಒಂದು ಸಮುದಾಯವೇ ಗಣ. ಬಳಕೆಯಲ್ಲಿರುವ ಕೆಲವು ಗಣಗಳ ಉದಾಹರಣೆಗಳನ್ನು ಇಲ್ಲಿ ಕೊಟ್ಟಿದೆ.

A : ನಿಮ್ಮ ತರಗತಿಯ ವಿದ್ಯಾರ್ಥಿಗಳ ಗಣ

B : ನಿಮ್ಮ ಕಾಲೇಜಿನ ಉಪಾಧ್ಯಾಯರುಗಳ ಗಣ

C : ನಿಮ್ಮ ಕಾಲೇಜಿನ ಪುಸ್ತಕ ಭಂಡಾರದ ಪುಸ್ತಕಗಳ ಗಣ

D : ನಿಮ್ಮ ಪಟ್ಟಣದಲ್ಲಿ ವಾಸಿಸುವ ಜನರ ಗಣ

E : ಭಾರತದ ಸಂಸ್ಥಾನಗಳು

F : ಸಂಖ್ಯೆಗಳ ಗಣ $\{0, 1, 2, 3, 4, 5, 6, 7, 8, 9\}$

N : ಎಣಿಕೆಯ ಸಂಖ್ಯೆಗಳ ಗಣ $\{1, 2, 3, \ldots\ldots\}$

I : ಪೂರ್ಣಾಂಕಗಳ ಗಣ $\{\ldots, -3, -2, -1, 0, 1, 2, \ldots\}$

ಈ ಗಣಗಳಲ್ಲಿ ಕೊನೆಯ ಎರಡು ಗಣಿತ ಶಾಸ್ತ್ರದಲ್ಲಿ ಬಹು ಮುಖ್ಯವಾದುವುಗಳು. ಮುಂದಿನ ಅಧ್ಯಾಯದಲ್ಲಿ ಅವುಗಳನ್ನು ಆಗಿಂದಾಗ್ಗೆ ಉಲ್ಲೇಖಿಸಲಾಗಿದೆ. ಬೇರೆ ಏನೂ ಹೇಳದಿದ್ದರೆ, N ಎಂಬುದು ಎಣಿಕೆಯ ಅಥವಾ ಸ್ವಾಭಾವಿಕ ಸಂಖ್ಯೆಗಳ ಗಣವನ್ನೂ, I ಎಂಬುದು ಎಲ್ಲಾ ಪೂರ್ಣಾಂಕಗಳ ಗಣವನ್ನೂ ಸೂಚಿಸುವುವು.

1·2 ಗಣಾಂಶಗಳು

ಒಂದು ಗಣಕ್ಕೆ ಸೇರಿರುವ ವಸ್ತುಗಳು ಯಾವುವು ಎಂಬುದು ನಮಗೆ ಸ್ಪಷ್ಟವಾಗಿ ತಿಳಿದಾಗ ಮಾತ್ರ ಆ ಗಣವು ನಿಶ್ಚಿತವಾಗುವುದು. ಗಣದ ವ್ಯಾಖ್ಯೆಯಲ್ಲಿ ಸಂಶಯ ವಾಗಲೀ ಅಥವಾ ದ್ವಂದ್ವಾರ್ಥವಾಗಲೀ ಇರಕೂಡದು.

ಉದಾಹರಣೆಗೆ " ಒಂದು ತರಗತಿಯಲ್ಲಿ ಎತ್ತರವಾಗಿರುವ ವಿದ್ಯಾರ್ಥಿಗಳ ಗಣ " ಎನ್ನುವ ವಾಕ್ಯವು ಗಣಿತ ಶಾಸ್ತ್ರದ ದೃಷ್ಟಿಯಿಂದ ಒಂದು ಗಣವನ್ನು ನಿರೂಪಿಸುವುದಿಲ್ಲ. ಕಾರಣ, ಯಾವ ವಿದ್ಯಾರ್ಥಿಗಳು ಎತ್ತರವೆಂದು ಪರಿಗಣಿಸುವ ಸಂಶಯವು ಯಾವಾಗಲೂ ಬರುವುದು!

The objects which make up a set are called its *elements*. In the examples of para 1.1, the elements of the set A are the students of your class, the elements of the set C are the books in your College library, and so on.

You will notice that the number of elements in each of the sets A, B, C, D, E and F is finite. The set F has 10 elements and the number in each of the preceding sets can be counted. Such sets are called *finite sets.*

On the other hand we cannot count the number of elements in the sets N and I. Such sets are called *infinite sets.*

1.3 The Sign of "Belonging to"—$\in$—We usually denote sets by capital letters and elements by small letters. Let a be an object and E a set. If a is an element of E we denote this by writing $a \in E$. The symbol $\in$ is read as "is an element of" or "belongs to".

If a is not an element of E, we denote this by writing $a \notin E$. We read this as : "a is not an element of E" or "a does not belong to E".

Thus for the set of natural numbers N. we can write :

$$2 \in N, \quad 5 \in N, \quad -2 \notin N, \quad \tfrac{1}{4} \notin N$$

We now state an important relationship between objects and sets. If E is a given set and x any object, then one and only one of the following statements is true :—

$$\text{Either } x \in E \quad \text{or} \quad x \notin E$$

1.4 Methods of defining and representing sets— There are two methods commonly used to define a set —

(i) the Tabulation Method (or "Roster" Method) and
(ii) the Rule Method.

ಒಂದು ಗಣವನ್ನು ರಚಿಸುವ ವಸ್ತುಗಳಿಗೆ ಗಣಾಂಶಗಳೆಂದು ಹೆಸರು. 1.1ರಲ್ಲಿ ಹೇಳಿರುವ ಉದಾಹರಣೆಗಳಲ್ಲಿ, ನಿಮ್ಮ ತರಗತಿಯ ವಿದ್ಯಾರ್ಥಿಗಳೆಲ್ಲರೂ A ಗಣದ ಗಣಾಂಶಗಳು, ನಿಮ್ಮ ಪುಸ್ತಕ ಭಂಡಾರದ ಪುಸ್ತಕಗಳೆಲ್ಲವೂ C ಗಣದ ಗಣಾಂಶಗಳು, ಇತ್ಯಾದಿ.

A, B, C, D, E ಮತ್ತು F ಈ ಪ್ರತಿಯೊಂದು ಗಣದಲ್ಲಿಯೂ ಇರುವ ಗಣಾಂಶಗಳ ಸಂಖ್ಯೆಯು ಪರ್ಯಾಪ್ತವೆಂಬುದನ್ನು ನೀವು ಗಮನಿಸುವಿರಿ. F ಗಣದಲ್ಲಿ 10 ಗಣಾಂಶಗಳಿವೆ. ಇದಕ್ಕೆ ಹಿಂದಿನ ಎಲ್ಲ ಗಣಗಳಲ್ಲಿಯೂ ಇರುವ ಗಣಾಂಶಗಳ ಸಂಖ್ಯೆಯನ್ನು ಎಣಿಸಿ ಬಿಡಬಹುದು. ಇಂತಹ ಗಣಗಳಿಗೆ ಪರ್ಯಾಪ್ತ ಗಣಗಳು ಎಂದು ಹೆಸರು.

ಆದರೆ, N ಮತ್ತು I ಗಣಗಳಲ್ಲಿರುವ ಗಣಾಂಶಗಳನ್ನು ಎಣಿಕೆ ಮಾಡುವುದು ಸಾಧ್ಯವಾಗದು. ಇವುಗಳನ್ನು ಅಪರ್ಯಾಪ್ತ ಗಣಗಳು ಎಂದು ಕರೆಯುತ್ತೇವೆ.

1·3 $\in$ ಚಿಹ್ನೆಯ ವಿವರಣೆ

ಸಾಮಾನ್ಯವಾಗಿ ಗಣಗಳನ್ನು A, B, C ಮುಂತಾದ ದೊಡ್ಡ ಅಕ್ಷರಗಳಿಂದಲೂ ಗಣಾಂಶಗಳನ್ನು a, b, c ಮುಂತಾದ ಚಿಕ್ಕ ಅಕ್ಷರಗಳಿಂದಲೂ ಸೂಚಿಸುತ್ತೇವೆ. a ಎಂಬುದು E ಗಣದ ಒಂದು ಗಣಾಂಶವಾದರೆ ಅದನ್ನು $a \in E$ ಎಂದು ಬರೆಯುತ್ತೇವೆ. $\in$ ಚಿಹ್ನೆಯನ್ನು ". . . ಎಂಬುದರ ಗಣಾಂಶ" ಅಥವಾ ". . . ಇದಕ್ಕೆ ಸೇರಿದೆ" ಎಂದು ಓದಬೇಕು. a ಯು E ಗಣದ ಗಣಾಂಶವಲ್ಲದಿದ್ದಲ್ಲಿ $a \notin E$ ಎಂದು ಬರೆಯುತ್ತೇವೆ. ಇದನ್ನು "a ಯು E ಎಂಬುದರ ಗಣಾಂಶವಲ್ಲ" ಅಥವಾ "a ಯು E ಗೆ ಸೇರಿಲ್ಲ" ಎಂದು ಓದಬೇಕು.

ಹೀಗೆಯೇ ಸ್ವಾಭಾವಿಕ ಸಂಖ್ಯೆಗಳ ಗಣ N [ಎಂಬುದನ್ನು] ಪರಿಶೀಲಿಸಿದರೆ $2 \in N$, $5 \in N$, $-2 \notin N$, $\frac{1}{4} \notin N$

ಈಗ ನಾವು ವಸ್ತುಗಳಿಗೂ ಮತ್ತು ಗಣಗಳಿಗೂ ಇರುವ ಒಂದು ಮುಖ್ಯ ಸಂಬಂಧವನ್ನು ನಿರೂಪಿಸೋಣ. E ಎಂಬುದು ಒಂದು ಗಣವೂ, x ಎಂಬುದು ಒಂದು ವಸ್ತುವೂ ಆಗಿದ್ದರೆ ಈ ಕೆಳಗಿನ ಉಕ್ತಿಗಳಲ್ಲಿ ಒಂದು ಮಾತ್ರ ಸರಿಯಾಗಿರುವುದು :

$$x \in E \text{ ಅಥವಾ } x \notin E$$

1·4 ಗಣಗಳನ್ನು ಹೆಸರಿಸುವ ಮತ್ತು ನಿರೂಪಿಸುವ ವಿಧಾನಗಳು

ಗಣಗಳನ್ನು ಹೆಸರಿಸುವ ಎರಡು ವಿಧಾನಗಳು ಸಾಮಾನ್ಯವಾಗಿ ಬಳಕೆಯಲ್ಲಿವೆ.

(i) ಪಟ್ಟಿ ವಿಧಾನ ಮತ್ತು (ii) ಗುಣ ವಿಧಾನ.

In the Tabulation method, all the elements are written down within curly brackets $\{\ldots\ldots\ldots\ldots\}$. If there are too many elements, the first few are written down in such a way as to indicate clearly what the others are.

Examples :

$G=\{1, 3, 5, 7, 9\}$. G is the set consisting of the 5 numbers appearing within the brackets.

$O=\{1, 3, 5, 7, \ldots\ldots\ldots\}$, the set O consists of *all* odd positive integers. The dots indicate that there is no last element to the set.

In the Rule method, we specify the set by stating a characteristic property which all the elements of the set possess and which no other object possesses.

Examples :

(i) "A is the set of students of our class".

This statement can be written symbolically as follows :

$$A=\{x \mid x \text{ is a student of our class}\}$$

We read the above as : "A is the set of elements x such that x is a student of our class". The vertical line within the brackets stands for "such that". The student must become familiar with this notation.

(ii) $G=\{x \mid x \text{ is a positive odd integer less than } 10\}$

"G is the set of elements x such that x is a positive odd integer less than 10." We easily compute the elements of G as the numbers 1, 3, 5, 7, 9. Hence we may also represent G by the tabulation method as follows : $G=\{1, 3, 5, 7, 9\}$

ಪಟ್ಟಿ ವಿಧಾನದಲ್ಲಿ ಎಲ್ಲ ಗಣಾಂಶಗಳನ್ನೂ ಪುಷ್ಪಾವರಣದಲ್ಲಿ {...............} ಬರೆಯಲಾಗುವುದು. ಗಣಾಂಶಗಳು ಬಹಳವಾಗಿದ್ದರೆ ಅವುಗಳೆಲ್ಲವನ್ನೂ ಊಹಿಸಲು ಶಕ್ಯವಾಗುವಂತೆ ಮೊದಲಿನ ಕೆಲವು ಗಣಾಂಶಗಳನ್ನು ಮಾತ್ರ ಬರೆಯುತ್ತೇವೆ.

ಉದಾಹರಣೆಗೆ $G=\{1, 3, 5, 7, 9\}$. Gಯು ಆವರಣದಲ್ಲಿರುವ 5 ಸಂಖ್ಯೆಗಳ ಗಣ.

$O=\{1, 3, 5, 7, \ldots\}$. O ಗಣವು ಎಲ್ಲಾ ಧನ ವಿಷಮ ಸಂಖ್ಯೆಗಳನ್ನೂ ಹೊಂದಿರುವುದು. ಅಲ್ಲಿರುವ ಚುಕೆಗಳು ಗಣದಲ್ಲಿ ಕೊನೆಯ ಗಣಾಂಶ ಯಾವುದೂ ಇಲ್ಲವೆಂಬುದನ್ನು ತೋರಿಸುವುವು.

ಗುಣ ವಿಧಾನದಲ್ಲಿ, ಇತರ ಯಾವ ವಸ್ತುಗಳೂ ಹೊಂದಿರದ, ಗಣದ ಪ್ರತಿಯೊಂದು ಗಣಾಂಶ ಮಾತ್ರ ಹೊಂದಿರುವ ಒಂದು ವಿಶಿಷ್ಟ ಗುಣದಿಂದ ಗಣವನ್ನು ನಿಷ್ಕರ್ಷಿಸಲಾಗುವುದು.

ಉದಾಹರಣೆ: (i) " A ಎಂಬುದು ನಮ್ಮ ತರಗತಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳ ಗಣ ".

ಈ ವಾಕ್ಯವನ್ನೇ ಸಾಂಕೇತಿಕವಾಗಿ

$A=\{x \mid x$ ನಮ್ಮ ತರಗತಿಯ ಒಬ್ಬ ವಿದ್ಯಾರ್ಥಿ$\}$

ಎಂದು ಬರೆಯಬಹುದು. ಇದನ್ನು ಓದುವ ಕ್ರಮ: " A ಎಂಬುದು ನಮ್ಮ ತರಗತಿಯ ವಿದ್ಯಾರ್ಥಿಯಾಗಿರುವಂಥ x ಎಂಬ ಗಣಾಂಶಗಳ ಗಣ ". ಆವರಣದಲ್ಲಿರುವ ಊರ್ಧ್ವ ರೇಖೆಯು "ಅಂಥ" ಎಂಬುದನ್ನು ಸೂಚಿಸುತ್ತದೆ. ವಿದ್ಯಾರ್ಥಿಯು ಈ ಸಾಂಕೇತಿಕ ನಿರೂಪಣಾ ಕ್ರಮವನ್ನು ಬಳಕೆ ಮಾಡಿಕೊಳ್ಳಬೇಕು.

(ii) $G=\{x \mid x$ ಎಂಬುದು 10ಕ್ಕಿಂತ ಕಡಿಮೆಯಾಗಿರುವ ಧನ ವಿಷಮ ಸಂಖ್ಯೆ$\}$

"G ಎಂಬುದು, 10ಕ್ಕಿಂತ ಕಡಿಮೆಯಾಗಿರುವ ಧನ ವಿಷಮ ಸಂಖ್ಯೆಯಾಗಿರುವಂಥ x ಗಣಾಂಶಗಳ ಗಣ". Gಯ ಗಣಾಂಶಗಳು 1, 3, 5, 7, 9 ಎಂಬ ಸಂಖ್ಯೆಗಳೆಂಬುದನ್ನು ನಾವು ಸುಲಭವಾಗಿ ಕಂಡು ಹಿಡಿಯಬಹುದು. ಆದ್ದರಿಂದ ನಾವು G ಯನ್ನು ಪಟ್ಟಿ ವಿಧಾನದಿಂದಲೂ ಈ ಕೆಳಕಂಡಂತೆ ನಿರೂಪಿಸಬಹುದು.

$G=\{1, 3, 5, 7, 9\}$

(iii) $H = \{x \mid x \in N \text{ and } x \text{ divides } 15\}$

"H is the set of elements x such that x belongs to the set of natural numbers and x divides 15."

To identify the elements of H, we have to find those natural numbers which divide 15. These are obviously 1, 3, 5, 15. Hence we can also write $H = \{1, 3, 5, 15\}$.

1.5 Equal Sets —Two sets A and B are said to be equal if each element of A is also an element of B, and each element of B is also an element of A. We denote equality by writing $A = B$.

Example :

Let $A = \{1, 0, -2, 5, 7, -3\}$ and $B = \{-3, -2, 0, 1, 5, 7\}$.

It is easy to verify that $A = B$.

The following are three important properties of equality of sets :—

(i) For every set A, we have $A = A$.
This is called the *reflexive* property.

(ii) If $A = B$, then $B = A$.
This is the *symmetric* property.

(iii) If $A = B$ and $B = C$, then $A = C$.
This is called the *transitive* property.

Proof of the transitive property :—

Given $A = B$ and $B = C$. To prove that $A = C$.

Let x be *any* element of A.

Since $A = B$, $\therefore x \in B$.

Again since $B = C$, $\therefore x \in C$.

(iii) $H = \{x \mid x \in N$ ಮತ್ತು x ಎಂಬುದು 15ನ್ನು ಭಾಗಿಸುವುದು$\}$

"H ಎಂಬುದು, 15ನ್ನು ಭಾಗಿಸುವಂಥ ಸ್ವಾಭಾವಿಕ ಸಂಖ್ಯೆ x ಎಂಬ ಗಣಾಂಶಗಳ ಗಣ." Hನ ಗಣಾಂಶಗಳನ್ನು ಗೊತ್ತುಮಾಡಲು, 15ನ್ನು ಭಾಗಿಸುವ ಸ್ವಾಭಾವಿಕ ಸಂಖ್ಯೆಗಳು ಯಾವುವು ಎಂಬುದನ್ನು ಕಂಡುಹಿಡಿಯಬೇಕು. ಇವು ಸ್ಪಷ್ಟವಾಗಿ 1, 3, 5, 15 ಎಂಬುವುಗಳು. ಆದ್ದರಿಂದ ನಾವು $H = \{1, 3, 5, 15\}$ ಎಂದೂ ಬರೆಯಬಹುದು.

1·5 ಸಮಗಣಗಳು

A ಮತ್ತು B ಎಂಬ ಎರಡು ಗಣಗಳಲ್ಲಿ A ಯ ಪ್ರತಿಯೊಂದು ಗಣಾಂಶವು B ಯ ಗಣಾಂಶವಾಗಿಯೂ, B ಯ ಪ್ರತಿಯೊಂದು ಗಣಾಂಶವು A ಯ ಗಣಾಂಶವಾಗಿಯೂ ಇದ್ದರೆ ಅವುಗಳನ್ನು ಸಮಗಣಗಳು ಎಂದು ಕರೆಯುತ್ತೇವೆ.

ಇವುಗಳ ಸಮತ್ವವನ್ನು $A = B$ ಎಂದು ಬರೆಯುವುದರ ಮೂಲಕ ಸೂಚಿಸುತ್ತೇವೆ.

ಉದಾಹರಣೆ : $A = \{1, 0, -2, 5, 7, -3\}$,

$B = \{-3, -2, 0, 1, 5, 7\}$

$A = B$ ಎಂದು ತಾಳೆನೋಡುವುದು ಬಹು ಸುಲಭ.

ಗಣಗಳ ಸಮತ್ವದ ಮೂರು ಮುಖ್ಯ ಗುಣಗಳನ್ನು ಕೆಳಗೆ ಕೊಟ್ಟಿದೆ :

(i) ಯಾವುದೇ ಗಣ A ಗೆ $A = A$ ಆಗಿರುವುದು. ಇದಕ್ಕೆ ಪ್ರತಿಫಲನ ಗುಣವೆಂದು ಹೆಸರು.

(ii) $A = B$ ಆದರೆ, $B = A$ ಆಗಿರುವುದು. ಇದಕ್ಕೆ ಸಮಾಂಗ ಗುಣವೆಂದು ಹೆಸರು.

(iii) $A = B$ ಮತ್ತು $B = C$ ಆಗಿದ್ದರೆ $A = C$ ಆಗಿರುವುದು. ಇದಕ್ಕೆ ವಾಹಕ ಗುಣವೆಂದು ಹೆಸರು.

ವಾಹಕಗುಣದ ಸಾಧನೆ :

$A = B$ ಮತ್ತು $B = C$ ಎಂದು ಕೊಟ್ಟಾಗ, $A = C$ ಎಂದು ಸಾಧಿಸುವುದು.
x ಎಂಬುದು Aಗೆ ಸೇರಿದ ಯಾವುದಾದರೊಂದು ಗಣಾಂಶವಾಗಿರಲಿ.
$A = B$ ಆಗಿರುವುದರಿಂದ, $x \in B$.
ಪುನಃ $B = C$ ಆಗಿರುವುದರಿಂದ, $x \in C$.

Hence every element of A is also an element of C.....(a

Now let y be *any* element of C.

Since $B=C$, $\therefore y \in B$.

Again since $A=B$, $\therefore y \in A$.

Hence every element of C is also an element of A.....(b)
Combining (a) and (b) we get, by definition, $A=C$.

Exercises 1.1

1 Let $S=\{-3, 1, 0\ 2, -8\}$. Indicate which of the following statements are true and which are false :—

(i) $3 \in S$ (ii) $2 \in S$ (iii) $3 \notin S$ (iv) $-3 \in S$
(v) $-8 \notin S$ (vi) $1 \in S$ (vii) $0 \in S$ (viii) $8 \in S$.

2 Use both the rule method and the tabulation method to specify the following sets :—

(*a*) The mathematics teachers in your College.
(*b*) The divisors (or factors) of 12.
(*c*) The natural numbers which are multiples of 5 and less than 50.
(*d* The set of all prime numbers less than 20.

3 Use the rule method to specify the following sets :—

a The citizens of Ind a.
(*b*) The past students of your College.
(*c*) Rational numbers between 0 and 1.
(*d*) All prime numbers greater than 25.

Can the tabulation method be used to specify the above sets ? Explain the difficulty, if any.

ಆದ್ದರಿಂದ A ಯ ಪ್ರತಿಯೊಂದು ಗಣಾಂಶವೂ C ಯ ಒಂದು ಗಣಾಂಶವಾಗಿರುವುದು. ....(a)

ಈಗ y ಎಂಬುದು C ಯ ಯಾವುದಾದರೊಂದು ಗಣಾಂಶವಾಗಿರಲಿ.

$B=C$ ಆಗಿರುವುದರಿಂದ, $y \in B$.

ಪುನಃ $A=B$ ಆಗಿರುವುದರಿಂದ, $y \in A$

ಆದ್ದರಿಂದ C ಯ ಪ್ರತಿಯೊಂದು ಗಣಾಂಶವೂ A ಯ ಒಂದು ಗಣಾಂಶವಾಗಿರುವುದು. ....(b)

(a) ಮತ್ತು (b) ಗಳೆರಡರಿಂದ $A=C$ ಎಂದು ತಿಳಿಯುವುದು.

ಅಭ್ಯಾಸ 1·1

1 $S=\{-3, 1, 0, 2, -8\}$ ಆಗಿರಲಿ. ಈ ಕೆಳಗಿನ ಉಕ್ತಿಗಳಲ್ಲಿ ಯಾವುದು ಸರಿ ಮತ್ತು ಯಾವುದು ತಪ್ಪು ಎಂದು ಸೂಚಿಸಿ.

(i) $3 \in S$ (ii) $2 \in S$ (iii) $3 \notin S$ (iv) $-3 \notin S$ (v) $-8 \in S$ (vi) $1 \in S$ (vii) $0 \in S$ (viii) $8 \in S$.

2 ಈ ಕೆಳಕಂಡ ಗಣಗಳನ್ನು ನಿಶ್ಚಿತಗೊಳಿಸಲು ಗುಣವಿಧಾನ ಮತ್ತು ಪಟ್ಟಿ ವಿಧಾನಗಳೆರಡನ್ನು ಉಪಯೋಗಿಸಿ.

(a) ನಿಮ್ಮ ಕಾಲೇಜಿನ ಗಣಿತ ಅಧ್ಯಾಪಕರುಗಳ ಗಣ.

(b) 12ರ ಭಾಜಕಗಳು (ಅಪವರ್ತನಗಳು).

(c) 5ರ ಗುಣಕವಾಗಿರುವ ಮತ್ತು 50ಕ್ಕಿಂತ ಕಡಿಮೆ ಇರುವ ಸ್ವಾಭಾವಿಕ ಸಂಖ್ಯೆಗಳು.

(d) 20ಕ್ಕಿಂತ ಕಡಿಮೆಯಾಗಿರುವ ಅವಿಭಾಜ್ಯ ಸಂಖ್ಯೆಗಳು.

3 ಗುಣ ವಿಧಾನದಿಂದ ಈ ಕೆಳಕಂಡ ಗಣಗಳನ್ನು ನಿಶ್ಚಿತಗೊಳಿಸಿ

(a) ಭಾರತದ ಪ್ರಜೆಗಳು.

(b) ನಿಮ್ಮ ಕಾಲೇಜಿನ ಹಳೆಯ ವಿದ್ಯಾರ್ಥಿಗಳು

(c) 0 ಮತ್ತು 1 ಇವುಗಳ ನಡುವೆ ಇರುವ ಭಾಗಲಬ್ಧ ಸಂಖ್ಯೆಗಳು.

(d) 25ಕ್ಕಿಂತ ದೊಡ್ಡದಾದ ಎಲ್ಲಾ ಅವಿಭಾಜ್ಯ ಸಂಖ್ಯೆಗಳು.

ಮೇಲಿನ ಗಣಗಳನ್ನು ನಿಶ್ಚಿತಗೊಳಿಸಲು ಪಟ್ಟಿ ವಿಧಾನವನ್ನುಪಯೋಗಿಸಬಹುದೇ? ಏನಾದರೂ ತೊಡಕುಗಳಿದ್ದಲ್ಲಿ ವಿವರಿಸಿ.

4 Use the tabulation method to specify the following sets :—

(*a*) $A=\{x \mid x \in I \text{ and } x^2=1\}$

(*b*) $A=\{x \mid x$ is a fraction whose numerator is 1 and denominator a counting number less than $7\}$

(*c*) $A=\{x \mid x$ is an even counting number less than $11\}$.

(*d*) $A=\{x \mid x$ is the square of a counting number and $2<x<40\}$

5 In the following sets identify which are equal :—

$A=\{-2, 2\}$, $C=\{x \mid x^2=4\}$, $D=\{a, b, c\}$

$E=\{x \mid x \in N \text{ and } 1<x<5\}$, $F=\{c, a, b\}$,

$G=\{4, 2, 3\}$.

6 For each of the following sets state which is finite and which is infinite :—

(*a*) The set of points on a given line.

(*b*) The set of points on a given line at a distance of one unit from a given point on the line.

(*c*) The set of points in a given plane which are at a distance of one unit from a given point in that plane.

(*d*) The integers between -3 and 3.

1.6 Subsets—A set A is said to be a subset of a set B if every element of A is also an element of B. We denote this relationship symbolically by writing $A \subset B$. The symbol $\subset$ is read as "is a subset of" or "is contained in".

The same relationship may be written as $B \supset A$, which we read as "B contains A."

4 ಪಟ್ಟಿ ವಿಧಾನದಿಂದ ಈ ಕೆಳಕಂಡ ಗಣಗಳನ್ನು ನಿಶ್ಚಿತಗೊಳಿಸಿ

(*a*) $A=\{x \mid x \in I$ ಮತ್ತು $x^2=1\}$

(*b*) $A=\{x \mid x$ ಎಂಬ ಭಿನ್ನರಾಶಿಯಲ್ಲಿ ಅಂಶವು 1 ಮತ್ತು ಛೇದವು 7ಕ್ಕಿಂತ ಕಡಿಮೆಯಾದ ಸ್ವಾಭಾವಿಕ ಸಂಖ್ಯೆ$\}$

(*c*) $A=\{x \mid x$ ಎಂಬುದು 11ಕ್ಕಿಂತ ಚಿಕ್ಕದಾದ ಎಣಿಕೆಯ ಸಮ ಸಂಖ್ಯೆ$\}$

(*d*) $A=\{x \mid x$ ಎಂಬುದು ಒಂದು ಎಣಿಕೆಯ ಸಂಖ್ಯೆಯ ವರ್ಗ ಮತ್ತು $2<x<40\}$

5 ಈ ಕೆಳಕಂಡ ಗಣಗಳಲ್ಲಿ ಯಾವುವು ಸಮಗಣಗಳೆಂದು ಗೊತ್ತುಮಾಡಿ:

$A=\{-2, 2\}$, $C=\{x \mid x^2=4\}$, $D=\{a, b, c\}$

$E=\{x \mid x \in N$ ಮತ್ತು $1<x<5\}$, $F=\{c, a, b\}$,

$G=\{4, 2, 3\}$.

6 ಈ ಕೆಳಕಂಡ ಪ್ರತಿಯೊಂದು ಗಣವೂ ಪರ್ಯಾಪ್ತವೇ ಅಥವಾ ಅಪರ್ಯಾಪ್ತವೇ ಎಂಬುದನ್ನು ತಿಳಿಸಿ:

(*a*) ದತ್ತ ರೇಖೆಯ ಮೇಲಿನ ಬಿಂದುಗಳ ಗಣ.

(*b*) ದತ್ತ ರೇಖೆಯಮೇಲಿನ ಒಂದು ದತ್ತ ಬಿಂದುವಿನಿಂದ ಒಂದು ಮೂಲಮಾನ ದೂರದಲ್ಲಿರುವ ಬಿಂದುಗಳ ಗಣ.

(*c*) ದತ್ತ ಸಮತಲದಲ್ಲಿನ ಒಂದು ದತ್ತ ಬಿಂದುವಿನಿಂದ ಒಂದು ಮೂಲಮಾನ ದೂರದಲ್ಲಿರುವ ಬಿಂದುಗಳ ಗಣ.

(*d*) -3 ಮತ್ತು 3ಗಳ ನಡುವೆ ಇರುವ ಪೂರ್ಣಾಂಕಗಳು.

1.6 ಉಪಗಣಗಳು

A ಮತ್ತು B ಎಂಬ ಎರಡು ಗಣಗಳಲ್ಲಿ Aಯ ಪ್ರತಿಯೊಂದು ಗಣಾಂಶವೂ Bಯ ಗಣಾಂಶವಾಗಿದ್ದರೆ, Aಯನ್ನು Bಯ ಉಪಗಣ ಎಂದು ಕರೆಯುವೆವು. ಇದನ್ನು ಸಾಂಕೇತಿಕವಾಗಿ $A \subset B$ ಎಂದು ಸೂಚಿಸುತ್ತೇವೆ. $\subset$ ಎಂಬ ಚಿಹ್ನೆಯನ್ನು "....ಯ ಉಪಗಣ" ಅಥವಾ "........ಯಲ್ಲಿ ಸೇರಿದೆ" ಎಂದು ಓದುತ್ತೇವೆ.

ಇದೇ ಸಂಬಂಧವನ್ನು $B \supset A$ ಎಂದೂ ಬರೆಯಬಹುದು. ಇದನ್ನು "B ಎಂಬುದು Aಯನ್ನು ಒಳಗೊಂಡಿದೆ" ಎಂದು ಓದುತ್ತೇವೆ.

Referring to the definition of equality of sets, we can restate that definition in the following form —

$A = B$ if and only if $A \subset B$ and $B \subset A$.

Examples :

(i) Let A be the set of students of your class and B the set of students of your College. Obviously $A \subset B$.

(ii) Let $A = \{1, 2, 3\}$, $B = \{1, 2, 3, 4, 7\}$, and $C = \{1, 2, 3, 4, 5, 6, 7, 8, 9\}$.
Then $A \subset C$, $B \subset C$, and $A \subset B$.

PROPERTIES OF INCLUSION—(i) For every set A, we have $A \subset A$. This is the *reflexive* property.

(ii) If $A \subset B$ and $B \subset A$, then $A = B$. This is called the *anti-symmetric* property.

(iii) If $A \subset B$ and $B \subset C$, then $A \subset C$. This is the *transitive* property.

The student should compare these three properties with the corresponding properties of equality of sets stated in para 1.5. He will notice the difference between the symmetric property of equality and the anti-symmetric property of inclusion. In the case of inclusion, if $A \subset B$, it does not necessarily follow that $B \subset A$, since B may contain elements which are not in A.

If $A \subset B$ and B contains elements which are not in A, then A is called a *proper subset* of B.

Example :—Let A be the set of all students of your College and B the set of all students of your City. Then A is a proper subset of B. Why?

ಎರಡು ಗಣಗಳ ಸಮತ್ವದ ನಿರೂಪಣೆಯನ್ನು ಈ ಕೆಳಕಂಡಂತೆ ಪುನಃ ಬರೆಯಬಹುದು.

$A \subset B$ ಮತ್ತು $B \subset A$ ಆದಾಗ ಮಾತ್ರ $A=B$ ಆಗಿರುವುದು.

ಉದಾಹರಣೆಗಳು :—

(i) Aಯು ನಿಮ್ಮ ತರಗತಿಯ ವಿದ್ಯಾರ್ಥಿಗಳ ಗಣವೂ ಮತ್ತು B ಎಂಬುದು ನಿಮ್ಮ ಕಾಲೇಜಿನ ವಿದ್ಯಾರ್ಥಿಗಳ ಗಣವೂ ಆಗಿರಲಿ. $A \subset B$ ಎಂಬುದು ಸ್ಪಷ್ಟವಾಗಿದೆ.

(ii) $A=\{1, 2, 3, 4\}$, $B=\{1, 2, 3, 4, 7\}$, $C=\{1, 2, 3, 4, 5, 7, 8, 9\}$ ಎಂಬ ಗಣಗಳಾಗಿರಲಿ.

$A \subset C$, $B \subset C$ ಮತ್ತು $A \subset B$.

ಒಳಗೊಳ್ಳುವಿಕೆಯ ಗುಣಗಳು

(i) ಪ್ರತಿಯೊಂದು ಗಣ A ಗೂ $A \subset A$ ಇದಕ್ಕೆ ಪ್ರತಿಫಲನ ಗುಣ ಎಂದು ಹೆಸರು.

(ii) $A \subset B$ ಮತ್ತು $B \subset A$ ಆದರೆ $A=B$ ಆಗಿರುವುದು. ಇದಕೆ ಅಸಮಾಂಗ ಗುಣ ಎಂದು ಹೆಸರು.

(iii) $A \subset B$ ಮತ್ತು $B \subset C$ ಆದರೆ $A \subset C$ ಆಗಿರುವುದು. ಇದಕ್ಕೆ ವಾಹಕ ಗುಣ ಎಂದು ಹೆಸರು.

ವಿದ್ಯಾರ್ಥಿಯು ಈ ಮೂರು ಗುಣಗಳನ್ನು 1.5ರಲ್ಲಿ ಹೇಳಿರುವ ಸಮತೆಯ ಗುಣಗಳೊಂದಿಗೆ ಹೋಲಿಸಬೇಕು. ಸಮತೆಯ ಸಮಾಂಗ ಗುಣಕ್ಕೂ ಒಳಗೊಳ್ಳುವಿಕೆಯ ಅಸಮಾಂಗ ಗುಣಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಒಳಗೊಳ್ಳುವಿಕೆಯ ಸಂದರ್ಭದಲ್ಲಿ $A \subset B$ ಆದರೆ, $B \subset A$ ಎಂಬುದು ಆಗಲೇಬೇಕೆಂದಿಲ್ಲ, ಕಾರಣ, Bಯಲ್ಲಿ Aಗೆ ಸೇರದ ಗಣಾಂಶಗಳಿರಬಹುದು.

$A \subset B$ ಆಗಿದ್ದು Bಯಲ್ಲಿ Aಗೆ ಸೇರದೆ ಇರುವ ಕೆಲವು ಗಣಾಂಶಗಳಿದ್ದರೆ Aಯನ್ನು Bಯ ಸಹಜ ಉಪಗಣ ಎಂದು ಕರೆಯುತ್ತೇವೆ.

ಉದಾಹರಣೆ : Aಯು ನಿಮ್ಮ ಕಾಲೇಜಿನ ವಿದ್ಯಾರ್ಥಿಗಳ ಗಣವೂ ಮತ್ತು Bಯು ನಿಮ್ಮ ನಗರದ ಎಲ್ಲ ವಿದ್ಯಾರ್ಥಿಗಳ ಗಣವೂ ಆಗಿರಲಿ. ಈಗ Aಯು Bಯ ಒಂದು ಸಹಜ ಉಪಗಣವಾಗಿದೆ. ಏಕೆ ?

1.7 The Null Set—Consider the set $E = \{a, b, c, d\}$. We can form all the subsets of E, (other than E itself) by removing one or more elements from E.

Thus by removing one element at a time, we obtain the subsets

$$\{a, b, c\}, \quad \{b, c, d\}, \quad \{c, d, a\}, \quad \{d, a, b\}.$$

Similarly subsets obtained by removing 2 elements are :

$$\{a, b\}, \ \{a, c\}, \ \{a, d\}, \ \{b, c\}, \ \{b, d\} \text{ and } \{c, d\}.$$

Subsets obtained by removing 3 elements are :—

$$\{a\}, \{b\}, \{c\}, \{d\}.$$

Are these all the subsets possible? No. We can obtain one more subset by removing all the 4 elements of E! We thus obtain a set which has no elements! This set is really a very important set. It is called the *empty set* or *null set*, and is usually denoted by the symbol ϕ. It is clear from the way we obtained it that the null set is a subset of every set, or symbolically, for any set E, $\phi \subset E$.

Note :—The student must be careful to distinguish between an element, say a, and the set $\{a\}$ consisting of the single element. He must also be careful in using the signs $\in$ and $\subset$. The sign $\in$ connects an element with a set ; whereas the sign $\subset$ connects two sets.

For example, if

$$E = \{a, b, c, d\}, \text{ then } a \in E \text{ and } \{a\} \subset E.$$

1.7 ಶೂನ್ಯಗಣ

$E = \{a, b, c, d\}$ ಎಂಬ ಗಣವನ್ನು ಪರಿಶೀಲಿಸಿ. E ಯಿಂದ ಒಂದು ಅಥವಾ ಹೆಚು ಗಣಾಂಶಗಳನ್ನು ತೆಗೆಯುವುದರ ಮೂಲದ Eಯ ಎಲ್ಲ ಉಪಗಣಗಳನ್ನೂ (Eಯ ಹೊರತಾಗಿ) ನಾವು ರಚಿಸಬಹುದು.

ಹೀಗೆ ಪ್ರತಿಸಲವೂ ಒಂದೊಂದು ಗಣಾಂಶವನ್ನು ತೆಗೆಯುವುದರ ಮೂಲಕ ಬರುವ ಉಪಗಣಗಳು—

$$\{a, b, c\}, \quad \{b, c, d\}, \quad \{c, d, a\}, \quad \{a, d, b\}$$

ಹೀಗೆಯೇ ಎರಡು ಗಣಾಂಶಗಳನ್ನು ತೆಗೆಯುವುದರಿಂದ ಬರುವ ಉಪಗಣಗಳು—

$$\{a, b\}, \quad \{a, c\}, \quad \{a, d\}, \quad \{b, c\}, \quad \{b, d\}, \quad \{c, d\}$$

ಮೂರು ಗಣಾಂಶಗಳನ್ನು ತೆಗೆಯುವುದರಿಂದ ಬರುವ ಉಪಗಣಗಳು—

$$\{a\}, \quad \{b\}, \quad \{c\}, \quad \{d\}$$

ಇಷ್ಟುಮಾತ್ರವೇ ? ಅಥವಾ ಇನ್ನೂ ಉಪಗಣಗಳನ್ನು ರಚಿಸಬಹುದೇ ? E ಗಣದಲ್ಲಿರುವ ನಾಲ್ಕೂ ಗಣಾಂಶಗಳನ್ನು ತೆಗೆಯುವುದರಿಂದ ಮತ್ತೊಂದು ಉಪಗಣವನ್ನು ಪಡೆಯಬಹುದು. ಹೀಗೆ ಗಣಾಂಶಗಳೇ ಇಲ್ಲದ ಒಂದು ಗಣ ನಮಗೆ ದೊರೆಯುವುದು. ಇದು ಬಹು ಮುಖ್ಯವಾದ ಗಣ. ಇದರ ಹೆಸರು ಶೂನ್ಯಗಣ. ಇದನ್ನು ಸಾಮಾನ್ಯವಾಗಿ ϕ ಸಂಕೇತದಿಂದ ಸೂಚಿಸುತ್ತೇವೆ. ಶೂನ್ಯ ಗಣವು ನಮಗೆ ದೊರೆತ ರೀತಿಯಿಂದಲೇ ಅದು ಪ್ರತಿಯೊಂದು ಗಣಕ್ಕೂ ಉಪಗಣವೆಂಬುದು ಸ್ಪಷ್ಟವಾಗುವುದು ಅಥವಾ ಸಾಂಕೇತಿಕವಾಗಿ ಯಾವುದೇ ಗಣ E ಗೆ, $\phi \subset E$.

ಸೂಚನೆ :—ವಿದ್ಯಾರ್ಥಿಯು ಗಣಾಂಶ a ಗೂ, a ಮಾತ್ರ ಗಣಾಂಶವಾಗಿರುವ ಒಂದು ಗಣಕ್ಕೂ ಇರುವ ವ್ಯತ್ಯಾಸವನ್ನು ಜಾಗರೂಕತೆಯಿಂದ ಗಮನಿಸಬೇಕು. $\in$ ಮತ್ತು $\subset$ ಚಿಹ್ನೆಗಳನ್ನು ಉಪಯೋಗಿಸುವಾಗಲೂ ಎಚ್ಚರಿಕೆ ವಹಿಸಬೇಕು. $\in$ ಎಂಬ ಚಿಹ್ನೆಯು ಗಣಾಂಶಕ್ಕೂ ಗಣಕ್ಕೂ ಇರುವ ಸಂಬಂಧವನ್ನು ಸೂಚಿಸುವುದಾದರೆ $\subset$ ಎಂಬ ಚಿಹ್ನೆಯು ಎರಡು ಗಣಗಳ ಸಂಬಂಧವನ್ನು ಸೂಚಿಸುವುದು.

ಉದಾಹರಣೆ—

$E = \{a, b, c, d\}$ ಆದರೆ, $a \in E$ ಮತ್ತು $\{a\} \subset E$

1.8 Operations on Sets, Intersection, Union, Complement–The student is familiar with operations on number. addition, subtraction, multiplication and division. By performing any one of these operations on two numbers we obtain a number.

Similarly we can *perform* certain important operations with sets. We shall define and illustrate the operations of Intersection, Union and Complementation

Intersection

The intersection of two sets A and B is the set o elements which belong to both A and B.

The intersection of A and B is written symbolically a $A \cap B$ which is read as " A intersection B." The defini tion may be neatly written in the form :

$$A \cap B = \{x \mid x \in A \text{ and } x \in B\}.$$

We read the above equation as : " A intersection B is the set of elements x such that x belongs to A and x belongs to B."

Examples :

(i) Let $A = \{1, 2, 3, 4\}$ and

$B = \{3, 4, 7, 9\}$.

Then $A \cap B = \{3, 4\}$

(ii) Let $A = \{a, b, c, d\}$ and $B = \{p, q, r, s\}$.

Here A and B have *no elements* in common.

Hence their intersection is the null set.

i.e. $A \cap B = \phi$

Two such sets are said to be *disjoint*.

1·8 ಗಣಗಳ ಮೇಲಿನ ಪರಿಕರ್ಮಗಳು— ಛೇದನ, ಸಂಯೋಗ ಮತ್ತು ಪೂರಕ ಕ್ರಿಯೆಗಳು

ಸಂಖ್ಯೆಗಳನ್ನು ಕೂಡುವುದು, ಕಳೆಯುವುದು, ಗುಣಿಸುವುದು ಮತ್ತು ಭಾಗಿಸುವುದು—ಈ ಪರಿಕರ್ಮಗಳು ವಿದ್ಯಾರ್ಥಿಗೆ ಪರಿಚಯವಾಗಿವೆ. ಈ ಯಾವುದಾದರೂ ಪರಿಕರ್ಮವನ್ನು ಎರಡು ಸಂಖ್ಯೆಗಳಿಗೆ ಮಾಡುವುದರಿಂದ ಪುನಃ ಒಂದು ಸಂಖ್ಯೆಯು ದೊರೆಯುವುದು.

ಹೀಗೆಯೇ ಗಣಗಳಲ್ಲಿಯೂ ಕೂಡ ಕೆಲವು ಮುಖ್ಯ ಪರಿಕರ್ಮಗಳನ್ನು ನಾವು ಮಾಡಬಹುದು. ಛೇದನ, ಸಂಯೋಗ ಮತ್ತು ಪೂರಕ ಕ್ರಿಯೆಗಳೆಂದರೇನು ಎಂಬುದನ್ನು ಉದಾಹರಣೆಗಳ ಸಹಿತ ತಿಳಿದುಕೊಳ್ಳೋಣ.

ಛೇದನ

A ಮತ್ತು B ಎರಡು ಗಣಗಳ ಛೇದನವು A ಮತ್ತು B ಎರಡು ಗಣಗಳಿಗೂ ಸೇರಿರುವ ಗಣಾಂಶಗಳ ಗಣ. A ಮತ್ತು Bಗಳ ಛೇದನವನ್ನು ಸಾಂಕೇತಿಕವಾಗಿ $A \cap B$ ಎಂದು ಬರೆಯುತ್ತೇವೆ. ಇದನ್ನು A ಛೇದನ B ಎಂದು ಓದಬಹುದು. ಇದನ್ನು ಈ ಕೆಳಕಂಡಂತೆ ಅಚ್ಚುಕಟ್ಟಾಗಿ ಬರೆಯಬಹುದು.

$$A \cap B = \{x \mid x \in A \text{ ಮತ್ತು } x \in B\}$$

ಈ ಮೇಲಿನ ಸಮೀಕರಣವನ್ನು "A ಛೇದನ B ಎಂಬುದು, Aಯ ಗಣಾಂಶವೂ, Bಯ ಗಣಾಂಶವೂ ಆಗಿರುವಂಥ x ಗಣಾಂಶಗಳ ಗಣ'' ಎಂದು ಓದುತ್ತೇವೆ,

ಉದಾಹರಣೆಗಳು—

(i) $A = \{1, 3, 4\}$ ಮತ್ತು
$B = \{3, 4, 7, 9\}$ ಎರಡು ಗಣಗಳಾಗಿರಲಿ
ಆಗ $A \cap B = \{3, 4\}$

(ii) $A = \{a, b, c, d\}$ ಮತ್ತು $B = \{p, q, r, s\}$ ಎಂದಿರಲಿ.
ಇಲ್ಲಿ A ಮತ್ತು B ಗಳೆರಡಕ್ಕೂ ಸಾಮಾನ್ಯವಾದ ಗಣಾಂಶಗಳಿಲ್ಲ.
ಆದ್ದರಿಂದ ಇವುಗಳ ಛೇದನವು ಶೂನ್ಯಗಣ.
ಅಥವಾ $A \cap B = \phi$

ಇಂತಹ ಎರಡು ಗಣಗಳನ್ನು ಬೇರ್ಪಟ್ಟ ಗಣಗಳೆಂದು ಹೇಳುತ್ತೇವೆ.

Union

The union of two sets A and B is the set of elements that belong to A or to B (or to both A and B). The union is written symbolically as $A \cup B$, which is read as "A union B". The definition of union may be expressed in the form :

$$A \cup B = \{ x \mid x \in A \text{ or } x \in B \}$$

We read the above as : "A union B is the set of elements x such that x belongs to A or x belongs to B".

Example : Let $A = \{1, 2, 3, 4\}$ and $B = \{3,4,7,9\}$.
Then $A \cup B = \{1,2,3,4,7,9\}$.

To write down $A \cup B$, we may first write all the elements of A and then those elements of B which are not in A. Note that we do not need to repeat the common elements found in both A and B.

Complement. The Universal Set.

In any discussion about sets, we are usually concerned with subsets of a fixed set U. This set U, consisting of *all* the elements under consideration is called the *universal set.* For example if we are considering sets whose elements are natural numbers, then the universal set in this discussion is the set

$$N = \{1,2,3,4,5, \ldots \ldots\}.$$

The *complement* of a set A with respect to the universal set U is the set of all elements of U which are not elements of A. The complement of A is usually denoted by A' and the definition of the complement can be written symbolically :

$$A' = \{ x \mid x \in U \text{ and } x \notin A\}$$

ಸಂಯೋಗ

A ಮತ್ತು B ಎರಡು ಗಣಗಳ ಸಂಯೋಗವು Aಗೆ ಅಥವಾ Bಗೆ (ಅಥವಾ ಇವೆರಡಕ್ಕೂ ಸೇರಿರುವ) ಗಣಾಂಶಗಳ ಗಣ. ಸಂಯೋಗವನ್ನು $A \cup B$ ಎಂದು ಬರೆಯುತ್ತೇವೆ. ಇದನ್ನು "A ಸಂಯೋಗ B" ಎಂದು ಓದುತ್ತೇವೆ. ಸಂಯೋಗವನ್ನು ಕೆಳಗೆ ತೋರಿಸಿದಂತೆ ನಿರೂಪಿಸಬಹುದು.

$$A \cup B = \{x \mid x \in A \text{ ಅಥವಾ } x \in B\}$$

ಇದನ್ನು "A ಸಂಯೋಗ B ಎಂಬುದು Aಗಾಗಲೀ ಅಥವಾ Bಗಾಗಲೀ ಸೇರಿರುವಂತಹ x ಗಣಾಂಶಗಳ ಗಣ" ಎಂದೂ ಓದುತ್ತೇವೆ,

ಉದಾಹರಣೆ :

$A = \{1, 2, 3, 4\}$ $B = \{3, 4, 7, 9\}$ ಆದರೆ,

$A \cup B = \{1, 2, 3, 4, 7, 9\}$

$A \cup B$ ಗಣವನ್ನು ಬರೆಯುವಾಗ ಮೊದಲು Aಯ ಗಣಾಂಶಗಳನ್ನು ಬರೆದು ಅನಂತರ Aಯಲ್ಲಿಲ್ಲದ Bಯ ಗಣಾಂಶಗಳನ್ನು ಬರೆಯಬಹುದು. A ಮತ್ತು B ಗಳೆರಡರಲ್ಲಿಯೂ ಇರುವ ಗಣಾಂಶಗಳನ್ನು ಪುನಃ ಬರೆಯ ಬೇಕಾಗಿಲ್ಲವೆಂಬುದನ್ನು ಗಮನಿಸಿ.

ಪೂರಕ, ವಿಶ್ವಗಣ

ಗಣಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ನಾವು ಸಾಮಾನ್ಯವಾಗಿ ಯಾವುದಾದರೂ ಒಂದು ನಿಯತಗಣ U ಎಂಬುದರ ಉಪಗಣಗಳನ್ನು ಪರಿಶೀಲಿಸುತ್ತೇವೆ. ಪರಿಶೀಲನೆಯಲ್ಲಿರುವ ಎಲ್ಲಾ ಗಣಾಂಶಗಳನ್ನು ಒಳಗೊಂಡಿರುವ U ಗಣವನ್ನು ವಿಶ್ವ ಗಣವೆಂದು ಕರೆಯುತ್ತೇವೆ. ಉದಾಹರಣೆಗೆ ಸ್ವಾಭಾವಿಕ ಸಂಖ್ಯೆಗಳು ಗಣಾಂಶವಾಗಿರುವ ಗಣಗಳನ್ನು ಪರಿಶೀಲಿಸಿದರೆ, ಇವುಗಳ ವಿಶ್ವ ಗಣವು

$N = \{1, 2, 3. 4, 5 \ldots\ldots\}$ ಆಗಿರುವುದು.

U ಎಂಬ ವಿಶ್ವಗಣಕ್ಕೆ ಸಂಬಂಧಿಸಿದಂತೆ A ಗಣದ ಪೂರಕವು Aಯ ಗಣಾಂಶವಲ್ಲದ Uನ ಗಣಾಂಶಗಳ ಗಣ. ರೂಢಿಯಲ್ಲಿ Aಯ ಪೂರಕವನ್ನು A' ಎಂದು ಸೂಚಿಸುತ್ತೇವೆ. ಪೂರಕದ ನಿರೂಪಣೆಯನ್ನು ಸಾಂಕೇತಿಕವಾಗಿ ಕೆಳಗೆ ಕಂಡಂತೆ ಬರೆಯಬಹುದು.

$$A' = \{x \mid x \in U \text{ ಮತ್ತು } x \notin A\}$$

which is read as "A' is the set of elements x such that x belongs to U and x does not belong to A".

Example : Let $U = \{0,1,2,3,4,5,6,7,8.9\}$ be the universal set and $A = \{1,3,5,7,9\}$.

Then $A' = \{0,2,4,6,8\}$.

Note that $A \cup A' = U$
and $A \cap A' = \phi$

Are these relations true for any set A and its complement A'?

Exercises 1.2

1 Write down all possible subsets of the following sets :

(i) $\{5,7,9\}$, (ii) $\{a, b\}$, (iii) $\{0\}$, (iv) ϕ

2 If $U = \{0.1,2,3,4,5,6,7,8,9\}$ be the universal set and $A = \{3,4,5,6\}$, $B = \{4,6,7,8,0\}$. $C = \{0,1,2,5,9\}$ find and tabulate the following sets :—

(i) $A \cup B$, (ii) C', (iii) $B \cap C$. (iv) $A \cup C'$, (v) $A' \cap C$, (vi) $(A \cup B)'$, (vii) $(B \cap C)'$, (viii) $B' \cup \phi$, (ix) $C \cap \phi$, (x) $A' \cup B'$, (xi) $B' \cap C'$.

3 Write formulæ of inclusion relative to the following sets :

Q is the set of quadrilaterals in a plane
C is the set of squares.
T is the set of trapezia.
R is the set of rectangles.
P is the set of parallelograms.

ಇದನ್ನು ಓದುವ ಕ್ರಮ : "A' ಎಂಬುದು Uನ ಗಣಾಂಶವಾಗಿಯೂ ಮತ್ತು Aಯ ಗಣಾಂಶವಲ್ಲದೆಯೂ ಇರುವಂಥ x ಗಣಾಂಶಗಳ ಗಣ"

ಉದಾಹರಣೆ : $U = \{0, 1, 3, 4, 5, 6, 7, 8, 9\}$

ಎಂಬುದು ವಿಶ್ವ ಗಣವಾಗಿರಲಿ. $A = \{1, 3, 5, 7, 9\}$ ಆಗಿರಲಿ.

ಆಗ, $A' = \{0, 2, 4, 6, 8\}$ ಆಗಿರುವುದು.

$A \cup A' = U$ ಮತು

$A \cap A' = \phi$ ಎಂಬುದನ್ನು ಗಮನಿಸಿ.

ಯಾವುದೇ ಗಣ A ಮತ್ತು ಅದರ ಪೂರಕ A' ಇವುಗಳಿಗೆ ಮೇಲಿನ ಸಂಬಂಧಗಳು ಅನ್ವಯಿಸುತ್ತವೆಯೇ ?

ಅಭ್ಯಾಸ 1.2

1 ಈ ಕೆಳಗಿನ ಗಣಗಳ ಎಲ್ಲಾ ಉಪಗಣಗಳನ್ನೂ ಬರೆಯಿರಿ.

(i) $\{5, 7, 9\}$, (ii) $\{a, b\}$, (iii) $\{0\}$, (iv) ϕ.

2 $U = \{0, 1, 2, 3, 4, 5, 6, 7, 8, 9\}$ ಎಂಬುದು ವಿಶ್ವ ಗಣವೂ ಮತ್ತು $A = \{3, 4, 5, 6\}$, $B = \{4, 6, 7, 8, 0\}$, $C = \{0, 1, 2, 5, 9\}$ ಆದರೆ, ಈ ಕೆಳಗಿನ ಗಣಗಳನ್ನು ಕಂಡುಹಿಡಿದು ಒಂದು ಪಟ್ಟಿ ಮಾಡಿ—

(i) $A \cup B$ (ii) C', (iii) $B \cap C$, (iv) $A \cup C'$,
(v) $A' \cap C$, (vi) $(A \cup B)'$, (vii) $(B \cap C)'$, (viii) $B' \cup \phi$,
(ix) $C \cap \phi$, (x) $A' \cap B'$, (xi) $B' \cap C'$.

3 ಈ ಕೆಳಗಿನ ಗಣಗಳಿಗೆ ಒಳಗೊಳ್ಳುವಿಕೆಯ ಸೂತ್ರಗಳನ್ನು ಬರೆಯಿರಿ.

Q ಎಂಬುದು ಒಂದು ಸಮತಲದಲ್ಲಿರುವ ಚತುರ್ಭುಜಗಳ ಗಣ.
C ಎಂಬುದು ಚಚ್ಚೌಕಗಳ ಗಣ.
T ಎಂಬುದು ತ್ರಾಪಿಜ ಗಳ ಗಣ.
R ಎಂಬುದು ಆಯಗಳ ಗಣ.
P ಎಂಬುದು ಸಮಾನಾಂತರ ಚತುರ್ಭುಜಗಳ ಗಣ.

4 Let T be the set of triangles in a plane, E the set of equilateral triangles, I the set of isosceles triangles, R the set of right angled triangles and B the set of obtuse angled triangles. Write formulæ of inclusion relative to these sets.

Calculate $E \cap R$, $B \cap E$, $T \cap R$, $T \cup E$.


5 If A is any subset of the universal set U, complete the following statements :—

(i) $A \cup U =$ (ii) $A \cap U =$ (iii) $A \cup \phi =$

(iv) $A \cap \phi =$ (v) $A \cup A =$ (vi) $A \cap A =$

(vii) $A \cup A' =$ (viii) $A \cap A' =$

1.9 Venn Diagrams—Relations among subsets may be conveniently represented by diagrams called Venn diagrams after the English logician John Venn (1834—1883). The universal set is usually represented by the region inside a rectangle. Then any subset may be represented by the region within a closed curve drawn inside the rectangle. Figure 1.1 shows the universal set U represented by the region within the rectangle ; a subset A represented by the area within a closed curve ; its complement A' represented by the area within the rectangle but outside the closed curve. Figures 1.2, 1.3 and 1.4 show two subsets A and B in different relationships which can easily be seen in the figures.



$A \cup A' = U$

Fig. 1.1

4 T ಎಂಬುದು ಒಂದು ಸಮತಲದಲ್ಲಿರುವ ತ್ರಿಭುಜಗಳ ಗಣವಾಗಿಯೂ, E ಎಂಬುದು ಸಮಬಾಹು ತ್ರಿಭುಜಗಳ ಗಣವಾಗಿಯೂ, I ಎಂಬುದು ಸಮದ್ವಿಬಾಹು ತ್ರಿಭುಜಗಳ ಗಣವಾಗಿಯೂ, R ಎಂಬುದು ಲಂಬಕೋನ ತ್ರಿಭುಜಗಳ ಗಣವಾಗಿಯೂ ಮತ್ತು B ಎಂಬುದು ವಿಶಾಲಕೋನ ತ್ರಿಭುಜಗಳ ಗಣವಾಗಿಯೂ ಇರಲಿ. ಈ ಗಣಗಳಿಗೆ ಸಂಬಂಧಿಸಿದಂತೆ ಇರುವ ಒಳಗೊಳ್ಳುವಿಕೆಯ ಸೂತ್ರಗಳನ್ನು ಬರೆಯಿರಿ.

ಇವುಗಳ ಬೆಲೆ ಕಂಡುಹಿಡಿಯಿರಿ $E\cap R$, $B\cap E$, $T\cap R$, $T\cup E$

5 A ಎಂಬುದು ವಿಶ್ವಗಣದ ಒಂದು ಉಪಗಣವಾಗಿದ್ದರೆ, ಈ ಕೆಳಗಿನ ಉಕ್ತಿಗಳನ್ನು ಪೂರ್ತಿ ಮಾಡಿ.


(i) $A \cup U =$ (ii) $A \cap U =$ (iii) $A \cup \phi =$

(iv) $A \cap \phi =$ (v) $A \cup A =$ (vi) $A \cap A =$


(vii) $A \cup A' =$ (viii) $A \cap A' =$

1.9 ವೆನ್ ಚಿತ್ರಗಳು

ಉಪಗಣಗಳಲ್ಲಿ ಇರುವ ಸಂಬಂಧಗಳನ್ನು ವೆನ್ ಚಿತ್ರಗಳಿಂದ ಉಪಯುಕ್ತವಾಗಿ ತೋರಿಸಬಹುದು. ಇಂಗ್ಲೆಂಡಿನ ತರ್ಕಶಾಸ್ತ್ರಜ್ಞ ಜಾರ್ಜ ವೆನ್ (1834-1883) ಎಂಬುವನ ಹೆಸರನ್ನನುಸರಿಸಿ ಇವುಗಳನ್ನು ಕರೆಯಲಾಗಿದೆ. ವಿಶ್ವಗಣವನ್ನು ಒಂದು ಆಯದ ಒಳಪ್ರದೇಶದಿಂದ ನಿರೂಪಿಸಲಾಗುವುದು. ಆಗ ಉಪಗಣವನ್ನು ಆಯದ ಒಳಭಾಗದಲ್ಲಿನ ಒಂದು ವಕ್ರರೇಖೆಯೊಳಗಿನ ಪ್ರದೇಶದಿಂದ ನಿರೂಪಿಸಬಹುದು. 1·1 ಚಿತ್ರದಲ್ಲಿ ವಿಶ್ವಗಣವನ್ನು ಆಯದೊಳಗಿನ ಪ್ರದೇಶದಿಂದಲೂ ಉಪಗಣ Aಯನ್ನು ಮುಚ್ಚಿದ ವಕ್ರರೇಖೆಯೊಳಗಿನ ಪ್ರದೇಶದಿಂದಲೂ ತೋರಿಸಿದೆ. Aಯ ಪೂರಕ A' ಎಂಬುದನ್ನು ಈ ಮುಚ್ಚಿದ ವಕ್ರರೇಖೆಯ ಹೊರಗಿರುವ ಆಯದ ಪ್ರದೇಶವು ತೋರಿಸುವುದು. 1.2, 1.3, ಮತ್ತು 1.4, ಚಿತ್ರಗಳು A ಮತ್ತು B ಎರಡು ಉಪಗಣಗಳು ಬೇರೆ ಬೇರೆ ರೀತಿಯ ಸಂಬಂಧಗಳನ್ನು ಹೊಂದಿರುವುದನ್ನು ತೋರಿಸುವುವು.




ಚಿತ್ರ 1.1




$A \cap B \neq \phi$ shaded portion represents $A \cap B$

Fig. 1.2




$A \cap B = \phi$

Fig. 1.3




$A \subset B$

Fig. 1.4




A∩B ≠ φ shaded portion represents A∩B

ಚಿತ್ರ 1.2



A ⊂ B

ಚಿತ್ರ 1.3



A ∩ B = φ

ಚಿತ್ರ 1.4

1.10 Simple Applications

(*a*) *Applications to Logic.* By using Venn diagrams, we can test whether a logical argument is valid. We shall illustrate the method by some simple examples.

Examples : (i) Consider the argument

"All who study mathematics are intelligent.

"Some students of our College study mathematics.

"Therefore some students of our College are intelligent."

The first two sentences are called *premises* and the last is called the *conclusion*. The argument is *valid* if the conclusion must necessarily follow from the premises. To test whether the argument is valid, we represent the statements by sets in a Venn diagram. The sets are drawn so that the premises are satisfied. If we can draw a Venn diagram in which the premises are true but the conclusion is not true, then the corresponding argument is not valid. If it is obvious that we cannot do so, then the argument is valid."

In the above example, let I be the set of intelligent students, M the set of students who study mathematics, and C the set of College students. The first premise implies that $M \subset I$. The second premise implies that $C \cap M \neq \phi$. If we represent the sets C, M and I in a Venn diagram satisfying these conditions, as in Figure 1.5, we see that the portion which represents our College students who study mathematics must necessarily lie in the area representing I. Symbolically we have

1.10 ಸುಲಭ ಪ್ರಯುಕ್ತಿಗಳು

(a) ತರ್ಕಕ್ಕೆ ಸಂಬಂಧಿಸಿದ ಪ್ರಯುಕ್ತಿಗಳು.

ವೆನ್ ಚಿತ್ರಗಳನ್ನುಪಯೋಗಿಸಿ, ಒಂದು ತಾರ್ಕಿಕ ವಾದವು ಸಾಧುವಾಗಿದೆಯೇ ಎಂಬುದನ್ನು ಪರೀಕ್ಷಿಸಬಹುದು.

ಈ ವಿಧಾನವನ್ನು ಕೆಲವು ಸುಲಭ ಉದಾಹರಣೆಗಳಿಂದ ತಿಳಿದುಕೊಳ್ಳೋಣ.

ಉದಾಹರಣೆಗಳು: (i) ಈ ಕೆಳಗಿನ ವಾದವನ್ನು ಪರಿಶೀಲಿಸಿ.

"ಗಣಿತ ಶಾಸ್ತ್ರವನ್ನು ಅಭ್ಯಸಿಸುವವರೆಲ್ಲಾ ಬುದ್ಧಿವಂತರು. ನಮ್ಮ ಕಾಲೇಜಿನ ಕೆಲವು ವಿದ್ಯಾರ್ಥಿಗಳು ಗಣಿತ ಶಾಸ್ತ್ರವನ್ನು ಅಭ್ಯಸಿಸುತ್ತಾರೆ. ಆದ್ದರಿಂದ ನಮ್ಮ ಕಾಲೇಜಿನ ಕೆಲವು ವಿದ್ಯಾರ್ಥಿಗಳು ಬುದ್ಧಿವಂತರು."

ಮೊದಲ ಎರಡು ವಾಕ್ಯಗಳಿಗೆ ಪೂರ್ವಪಕ್ಷ ವೆಂದೂ, ಕೊನೆಯ ವಾಕ್ಯಕ್ಕೆ ತೀರ್ಮಾನ ಎಂದೂ ಹೆಸರು.

ಪೂರ್ವ ಪಕ್ಷದಿಂದ ತೀರ್ಮಾನವು ಸ್ವಾಭಾವಿಕವಾದ ಪರಿಣಾಮವಾಗಿ ರೂಪಿತ ವಾದರೆ, ವಾದವು ಸಾಧುವೆನಿಸುವುದು. ಒಂದು ವಾದವು ಸಾಧುವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರೀಕ್ಷಿಸಲು ನಾವು ಕೊಟ್ಟಿರುವ ನಿರೂಪಣೆಗಳನ್ನು ವೆನ್ ಚಿತ್ರದಲ್ಲಿ ಗಣಗಳಾಗಿ ರಚಿಸುತ್ತೇವೆ. ಪೂರ್ವಪಕ್ಷಕ್ಕೆ ಸರಿಹೊಂದುವಂತೆ ಗಣಗಳನ್ನು ರಚಿಸಲಾಗುವುದು. ಪೂರ್ವಪಕ್ಷವು ಸರಿಯಾಗಿಯೂ ಮತ್ತು ತೀರ್ಮಾನವು ಸರಿ ಇಲ್ಲದಂತೆಯೂ ವೆನ್ ಚಿತ್ರಗಳನ್ನು ಬರೆಯಬಹುದಾದರೆ, ಅವಕ್ಕೆ ತಾಳೆಯಾಗಿರುವ ವಾದವು ಸಾಧುವಲ್ಲ. ಹಾಗೆ ಮಾಡುವುದು ಸಾಧ್ಯವಿಲ್ಲವೆಂಬುದು ಸ್ಪಷ್ಟವಾದಲ್ಲಿ, ವಾದವು ಸಾಧುವಾಗಿರುವುದು.

ಮೇಲಿನ ಉದಾಹರಣೆಯಲ್ಲಿ I ಎಂಬುದು ಬುದ್ಧಿವಂತರಾದ ವಿದ್ಯಾರ್ಥಿಗಳ ಗಣವಾಗಿಯೂ M ಎಂಬುದು ಗಣಿತಶಾಸ್ತ್ರವನ್ನು ಅಭ್ಯಸಿಸುವ ವಿದ್ಯಾರ್ಥಿಗಳ ಗಣವಾಗಿಯೂ ಮತ್ತು C ಎಂಬುದು ಕಾಲೇಜಿನ ವಿದ್ಯಾರ್ಥಿಗಳ ಗಣವಾಗಿಯೂ ಇರಲಿ. ಪೂರ್ವ ಪಕ್ಷದ ಮೊದಲ ಭಾಗವು $M \subset I$ ಎಂಬ ಅರ್ಥ ಕೊಡುವುದು. ಪೂರ್ವ ಪಕ್ಷದ ಎರಡನೆಯ ಭಾಗವು $C \cap M = \phi$ ಎಂಬ ಅರ್ಥ ಕೊಡುವುದು. ನಾವು C, M ಮತ್ತು N ಗಣಗಳನ್ನು ನಿಬಂಧನೆಗಳಿಗೆ ಒಳಪಡುವಂತೆ ವೆನ್ ಚಿತ್ರಗಳಲ್ಲಿ ನಿರೂಪಿಸಿದರೆ, ಚಿತ್ರ 1·5 ರಲ್ಲಿ ತೋರಿಸಿರುವಂತೆ ನಮ್ಮ ಕಾಲೇಜಿನಲ್ಲಿ ಗಣಿತಶಾಸ್ತ್ರವನ್ನು ಅಭ್ಯಸಿಸುವ ವಿದ್ಯಾರ್ಥಿಗಳನ್ನು ನಿರೂಪಿಸುವ ಭಾಗವು I ಭಾಗದ ಒಳಗಡೆ ಇರಲೇ ಬೇಕು.

$C \cap M) \subset I$, which means that " some college students are intelligent". Hence the conclusion is valid




Fig. 1.5

Note :—A logical argument can be valid without the statements being true in the usual sense. In the above example we may doubt whether the first statement is true! However we are only concerned here as to whether the conclusion necessarily follows from the premises.


(ii) "All who study mathematics are intelligent.

All our College students are intelligent.

Therefore some of our College students study mathematics."

Using the same notation as in (i). we see that the first premise implies $M \subset I$. The second premise implies $C \subset I$. The Venn diagram Fig. 1.6 shows sets C, M, and I satisfying these conditions but such that $C \cap M = \phi$, which means that in this case " no

ಸಾಂಕೇತಿಕವಾಗಿ $(C \cap M) \subset I$, ಇದರ ಅರ್ಥ "ಕಾಲೇಜಿನ ವಿದ್ಯಾರ್ಥಿಗಳಲ್ಲಿ ಕೆಲವರು ಬುದ್ಧಿವಂತರು'' ಆದ್ದರಿಂದ ತೀರ್ಮಾನವು ಸಾಧುವಾಗಿದೆ.



ಚಿತ್ರ 1.5

ಸೂಚನೆ : ಉಕ್ತಿಗಳು ನಮ್ಮ ಬಳಕೆಯ ಅರ್ಥದಲ್ಲಿ ಸರಿಯಾಗಿಲ್ಲದಿದ್ದರೂ ಒಂದು ತಾರ್ಕಿಕ ವಾದವು ಸಾಧುವಾಗಿರಬಹುದು. ಮೇಲಿನ ಉದಾಹರಣೆಯಲ್ಲಿ ಮೊದಲನೆಯ ಉಕ್ತಿಯು ಸರಿಯೇ ಎಂಬ ಶಂಕೆ ನಮಗೆ ಬರಬಹುದು. ಆದರೆ, ಪೂರ್ವ ಪಕ್ಷದಿಂದ ತೀರ್ಮಾನವು ಸ್ವಾಭಾವಿಕವಾಗಿ ರೂಪಿತವಾಗಿದೆಯೇ ಎಂಬುದಷ್ಟೆ ಇಲ್ಲಿ ನಮ್ಮ ಉದ್ದೇಶ.

(ii) " ಗಣಿತ ಶಾಸ್ತ್ರವನ್ನು ಅಭ್ಯಸಿಸುವವರೆಲ್ಲಾ ಬುದ್ಧಿವಂತರು.
ನಮ್ಮ ಕಾಲೇಜಿನ ವಿದ್ಯಾರ್ಥಿಗಳೆಲ್ಲಾ ಬುದ್ಧಿವಂತರು,
ಆದ್ದರಿಂದ ನಮ್ಮ ಕಾಲೇಜಿನ ಕೆಲವು ವಿದ್ಯಾರ್ಥಿಗಳು ಗಣಿತಶಾಸ್ತ್ರವನ್ನು ಅಭ್ಯಸಿಸುತ್ತಾರೆ.''

ಮೇಲಿನ ಉದಾಹರಣೆಯಲ್ಲಿನ ಸಂಕೇತಗಳನ್ನೇ ಉಪಯೋಗಿಸಿದಲ್ಲಿ, ಮೊದಲಿನ ಪೂರ್ವಪಕ್ಷವು $M \subset I$ ಎಂದೂ ಎರಡನೆಯ ಪೂರ್ವಪಕ್ಷವು $C \subset I$ ಎಂದೂ ಅರ್ಥ ಕೊಡುವುವು. 1·6 ವೆನ್ ಚಿತ್ರವು C, M ಮತ್ತು N ಗಳು ಈ ನಿಬಂಧನೆಗಳಿಗೊಳಪಟ್ಟು $C \cap M = \phi$ ಇರುವುದನ್ನು ತೋರಿಸುವುದು.

College student takes mathematics". This contradicts the conclusion and the argument is not valid.




Fig. 1·6

(*b*) *Analysis of Composite Data.* Venn diagrams help us to analyse certain types of data.

Examples :

(*i*) *In a class of* 120 *students, each is required to take at least one of the two subjects, chemistry and biology. If* 65 *take chemistry and* 22 *take both chemistry and biology how many take biology* ?

In the figure 1.7, the area marked *C* represents students who take chemistry. and the area marked *B*





Fig. 1.7

ಇದರ ಅರ್ಥ_‘‘ಕಾಲೇಜಿನ ಯಾವ ವಿದ್ಯಾರ್ಥಿಯೂ ಗಣಿತ ಶಾಸ್ತ್ರವನ್ನು ತೆಗೆದುಕೊಳ್ಳುವುದಿಲ್ಲ.’’ ಎಂದಾಗುತ್ತದೆ. ಇದು ತೀರ್ಮಾನವನ್ನು ವಿರೋಧಿಸುವುದರಿಂದ ವಾದವು ಸಾಧುವಾಗಿಲ್ಲ.




ಚಿತ್ರ 1.6

(*b*) ಮಿಶ್ರ ದತ್ತಾಂಶಗಳ ವಿಭಜನೆ: ಕೆಲವು ರೀತಿಯ ದತ್ತಾಂಶಗಳನ್ನು ವಿಭಜನೆ ಮಾಡಲು ವೆನ್ ಚಿತ್ರಗಳು ಸಹಾಯವಾಗುತ್ತವೆ.

ಉದಾಹರಣೆ (i) 120 ವಿದ್ಯಾರ್ಥಿಗಳಿರುವ ಒಂದು ತರಗತಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ರಸಾಯನ ಶಾಸ್ತ್ರ ಮತ್ತು ಜೀವ ಶಾಸ್ತ್ರ ಇವುಗಳೆರಡರಲ್ಲಿ ಕೊನೆಯ ಪಕ್ಷ ಒಂದನ್ನು ತೆಗೆದುಕೊಳ್ಳಬೇಕು. 65 ಜನರು ರಸಾಯನ ಶಾಸ್ತ್ರವನ್ನೂ 22 ಜನರು ರಸಾಯನ ಮತ್ತು ಜೀವ ಶಾಸ್ತ್ರಗಳೆರಡನ್ನೂ ತೆಗೆದುಕೊಂಡರೆ, ಜೀವ ಶಾಸ್ತ್ರವನ್ನು ತೆಗೆದುಕೊಂಡವರೆಷ್ಟು ಮಂದಿ?

ಚಿತ್ರ 1.7ರಲ್ಲಿ C ಗುರುತು ಮಾಡಿರುವ ಕ್ಷೇತ್ರವು ರಸಾಯನ ಶಾಸ್ತ್ರವನ್ನು ತೆಗೆದುಕೊಂಡ ವಿದ್ಯಾರ್ಥಿಗಳನ್ನೂ ಮತ್ತು B ಗುರುತು ಮಾಡಿರುವ ಕ್ಷೇತ್ರವು ಜೀವ



ಚಿತ್ರ 1.7

represents students who take biology. The common area will represent students who take both chemistry and biology. Inserting the figures given in the corresponding regions, we have 22 in the common region and 43 in the remaining part of C. Since the total area must represent 120 students we must have 55 in the part of B outside the common region, since $43 + 22 + 55 = 120$. We easily see from the figure that 43 take only chemistry, 55 take only biology and 22 take both chemistry and biology. Hence the number that take biology is $55+22 =77$.

(ii) *In a medical examination of* 150 *students it was found that* 90 *had eye trouble,* 50 *had heart trouble and* 30 *had both complaints. What percentage of the students had either eye trouble or heart trouble*?

In figure 1.8, the region within the rectangle represents 150 students, the area marked E represents those





Fig. 1·8

with eye trouble and that marked H represents those with heart trouble. We first insert the number 30 in the area common to H and E, since we are given that 30

ಶಾಸ್ತ್ರವನ್ನು ತೆಗೆದುಕೊಂಡ ವಿದ್ಯಾರ್ಥಿಗಳನ್ನೂ ಸೂಚಿಸುವುವು. ಇವೆರಡರಲ್ಲಿಯೂ ಸೇರಿರುವ ಕ್ಷೇತ್ರವು ಜೀವ ಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳೆರಡನ್ನೂ ತೆಗೆದುಕೊಂಡ ವಿದ್ಯಾರ್ಥಿಗಳನ್ನು ಸೂಚಿಸುವುದು. ಈ ಕೊಟ್ಟಿರುವ ಸಂಖ್ಯೆಗಳನ್ನು ತಕ್ಕ ಪ್ರದೇಶಗಳಲ್ಲಿ ಸೂಚಿಸುವುದರಿಂದ, 22 ಜನರು ಎರಡಕ್ಕೂ ಸೇರಿದ ಪ್ರದೇಶದಲ್ಲಿಯೂ ಮತ್ತು 43 ಜನರು ಮಿಕ್ಕಿರುವ Cಯ ಭಾಗದಲ್ಲಿಯೂ ಇದ್ದಾರೆ. ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 120 ಇರಬೇಕಾದುದರಿಂದ, ಈ ಸಾಮಾನ್ಯ ಭಾಗದ ಹೊರಗಡೆ B ಗೆ ಸೇರಿದ 55 ವಿದ್ಯಾರ್ಥಿಗಳು ಇರಬೇಕು. ಈ ಚಿತ್ರದಿಂದ 43 ವಿದ್ಯಾರ್ಥಿಗಳು ರಸಾಯನ ಶಾಸ್ತ್ರವನ್ನು ಮಾತ್ರ, 55 ವಿದ್ಯಾರ್ಥಿಗಳು ಜೀವ ಶಾಸ್ತ್ರವನ್ನು ಮಾತ್ರ ಮತ್ತು 22 ವಿದ್ಯಾರ್ಥಿಗಳು ರಸಾಯನ ಶಾಸ್ತ್ರ ಜೀವ ಶಾಸ್ತ್ರಗಳೆರಡನ್ನೂ ತೆಗೆದುಕೊಂಡಿರುವ ರೆಂದು ಸುಲಭವಾಗಿ ತಿಳಿಯುವುದು. ಆದ್ದರಿಂದ ಜೀವ ಶಾಸ್ತ್ರವನ್ನು ತೆಗೆದುಕೊಂಡವರ ಸಂಖ್ಯೆ $55+22=77$.

(ii) 150 ವಿದ್ಯಾರ್ಥಿಗಳ ಒಂದು ವೈದ್ಯಕೀಯ ಪರೀಕ್ಷೆಯಲ್ಲಿ 90 ಜನಕ್ಕೆ ಕಣ್ಣಿನ ವೇದನೆಯೂ 50 ಜನಕ್ಕೆ ಹೃದಯದ ವೇದನೆಯೂ ಮತ್ತು 30 ಜನಕ್ಕೆ ಎರಡೂ ತೊಂದರೆಗಳೂ ಇದ್ದುವು. ಶೇಕಡಾ ಎಷ್ಟು ವಿದ್ಯಾರ್ಥಿಗಳಿಗೆ ಕಣ್ಣಿನ ಅಥವಾ ಹೃದಯದ ವೇದನೆ ಇತ್ತು?

ಚಿತ್ರ 1.8ರಲ್ಲಿ ಆಯದಲ್ಲಿರುವ ಪ್ರದೇಶವು 150 ವಿದ್ಯಾರ್ಥಿಗಳನ್ನೂ, E ಗುರುತಿಸಿರುವ ಭಾಗವು ಕಣ್ಣಿನ ವೇದನೆ ಇರುವವರನ್ನೂ H ಗುರುತಿಸಿರುವ ಭಾಗವು



ಚಿತ್ರ 1.8

ಹೃದಯದ ವೇದನೆ ಇರುವವರನ್ನೂ ಸೂಚಿಸುವುವು. 30 ಜನರಿಗೆ ಎರಡೂ ತೊಂದರೆಗಳಿವೆಯೆಂದು ಕೊಟ್ಟಿರುವುದರಿಂದ ಮೊದಲು H ಮತ್ತು E ಗಳೆರಡಕ್ಕೂ ಸೇರಿರುವ ಭಾಗದಲ್ಲಿ 30 ಎಂಬ ಸಂಖ್ಯೆಯನ್ನು ಬರೆಯುತ್ತೇವೆ. ಈಗ ಉಳಿದಿರುವ

have both complaints. The remaining portion of E must then correspond to 60 and the remaining portion of H to 20. Inserting these numbers in the corresponding regions, we see that the number having either eye trouble or heart trouble is $60 + 30 + 20 = 110$.

$$\therefore \text{ Required percentage} = \frac{100 \times 110}{150} = 73\tfrac{1}{3}$$

Exercises 1.3

1 Show by using Venn diagrams that

(a) $A \cap B = B \cap A$, (b) $A \cap (B \cap C) = (A \cap B) \cap C$,
(c) $A \cup B = B \cup A$, (d) $A \cup (B \cup C) = (A \cup B) \cup C$,
(e) $(A \cup B)' = A' \cap B'$, (f) $(A \cap B)' = A' \cup B'$
(g) $A \cup (B \cap C) = (A \cup B) \cap (A \cup C)$,
(h) $A \cap (B \cup C) = (A \cap B) \cup (A\ U\ C)$.

2 Show by using Venn diagrams that

(a) $A \cup B = A$ if and only if $B \subset A$,
(b) $A \cap B = B$ if and only if $B \subset A$, (c) $(A')' = A$.

3 Use Venn diagrams to test whether the following arguments are valid :—

(a) All musicians are artistes.
Some Indians are musicians.
Therefore some Indians are artistes.

(b) Students are either intelligent or dull.
Students are either boys or girls.
Therefore some dull students are girls.

(c) All flowers are pretty.
Some girls are pretty.
Therefore some girls are flowers.

Eಯ ಭಾಗವು 60ನ್ನೂ ಮತ್ತೂ ಉಳಿದಿರುವ Hನ ಭಾಗವು 20ನ್ನೂ ಸೂಚಿಸಬೇಕು. ಆಯಾ ಭಾಗಗಳಲ್ಲಿ ಈ ಸಂಖ್ಯೆಗಳನ್ನು ಗುರುತಿಸುವುದರಿಂದ ಕಣ್ಣಿನ ಅಥವಾ ಹೃದಯದ ಬೇನೆ ಇರುವವರ ಸಂಖ್ಯೆಯು $60+30+20=110$ ಎಂದು ತಿಳಿಯುವುದು.

$$\therefore \text{ಬೇಕಾದ ಶೇಕಡಾ ಸಂಖ್ಯೆ} = 100 \times \frac{110}{150} = 73\tfrac{1}{3}$$

ಅಭ್ಯಾಸ 1.3

1 ವೆನ್ ಚಿತ್ರಗಳನ್ನು ಉಪಯೋಗಿಸಿ ಸಾಧಿಸಿ —

(a) $A \cap B = B \cap A$, (b) $A \cap (B \cap C) = (A \cap B) \cap C$,
(c) $A \cup B = B \cup A$, (d) $A \cup (B \cup C) = (A \cup B) \cup C$,
(e) $(A \cup B)' = A' \cap B'$, (f) $(A \cap B)' = A' \cup B'$,
(g) $A \cup (B \cap C) = (A \cup B) \cap (A \cap C)$,
(h) $A \cap (B \cup C) = (A \cap B) \cup (A \cap C)$

2 ವೆನ್ ಚಿತ್ರಗಳನ್ನು ಉಪಯೋಗಿಸಿ ಸಾಧಿಸಿ:

(a) $B \subset A$ ಆಗಿದ್ದರೆ ಮಾತ್ರ, $A \cup B = A$
(b) $B \subset A$ ಆಗಿದ್ದರೆ ಮಾತ್ರ, $A \cap B = B$
(c) $(A')' = A$

3 ಈ ಕೆಳಕಂಡ ವಾದಗಳು ಸಾಧುವಾಗಿವೆಯೋ ಇಲ್ಲವೇ ಎಂಬುದನ್ನು ಪರೀಕ್ಷಿಸಲು ವೆನ್ ಚಿತ್ರಗಳನ್ನು ಉಪಯೋಗಿಸಿ.

(a) ಸಂಗೀತ ಶಾಸ್ತ್ರಜ್ಞರೆಲ್ಲರೂ ಕಲಾವಿದರು,
ಕೆಲವು ಭಾರತೀಯರು ಸಂಗೀತ ಶಾಸ್ತ್ರಜ್ಞರು.
ಆದ್ದರಿಂದ ಕೆಲವು ಭಾರತೀಯರು ಕಲಾವಿದರು.

(b) ವಿದ್ಯಾರ್ಥಿಗಳು ಬುದ್ಧಿವಂತರು ಅಥವಾ ದಡ್ಡರು.
ವಿದ್ಯಾರ್ಥಿಗಳು ಹುಡುಗರು ಅಥವಾ ಹುಡುಗಿಯರು.
ಆದ್ದರಿಂದ ಕೆಲವು ದಡ್ಡ ವಿದ್ಯಾರ್ಥಿಗಳು ಹುಡುಗಿಯರು.

(c) ಹೂಗಳೆಲ್ಲವೂ ಅಂದವಾಗಿರುತ್ತವೆ.
ಕೆಲವು ಹುಡುಗಿಯರು ಅಂದವಾಗಿರುತ್ತಾರೆ.
ಆದ್ದರಿಂದ ಕೆಲವು ಹುಡುಗಿಯರು ಹೂಗಳು.

4 Given the following premises state the main conclusion in each case :—

(*a*) No intelligent people are bad-tempered.
Some intelligent people have dark eyes.
Therefore . . . .

(*b*) Some old things are valuable.
Valuable things are beautiful.
Therefore . . . .

5 Use Venn diagrams to solve the following problems :—

(*a*) Out of 800 students in a College, 200 take Physics, 300 take Chemistry and 50 take both Physics and Chemistry. Find the number that take neither Physics nor Chemistry.

(*b*) In a group of 250 College students, 77 take English, 109 take Economics, 75 take Sociology, 26 take English as well as Economics, 24 take English as well as Sociology, 30 take Economics as well as Sociology, and 11 take all three subjects. How many of the 250 students are not taking any of these subjects?

Hint—Draw a Venn diagram with 3 circles representing the 3 subjects. Insert the number 11 in the area common to the three circles and fill in the adjoining areas with appropriate numbers corresponding to the given data.

4 ಈ ಕೆಳಕಂಡ ಪೂರ್ವಪಕ್ಷಗಳನ್ನು ಕೊಟ್ಟಾಗ ಪ್ರತಿಸಂದರ್ಭದಲ್ಲಿಯೂ ಮುಖ್ಯ ತೀರ್ಮಾನವೇನೆಂಬುದನ್ನು ತಿಳಿಸಿ.

(a) ಬುದ್ಧಿವಂತರಾರಿಗೂ ಮುಂಗೋಪವಿರುವುದಿಲ್ಲ.
ಕೆಲವು ಬುದ್ಧಿವಂತರಿಗೆ ಕಪ್ಪು ಕಣ್ಣುಗಳಿವೆ.
ಆದ್ದರಿಂದ . . . . . ,

(b) ಕೆಲವು ಹಳೆಯ ವಸ್ತುಗಳು ಪ್ರಾಶಸ್ತ್ಯವುಳ್ಳವುಗಳು
ಪ್ರಾಶಸ್ತ್ಯವುಳ್ಳ ವಸ್ತುಗಳು ಸುಂದರವಾಗಿರುತ್ತವೆ.
ಆದ್ದರಿಂದ . . . . . .

5 ಈ ಸಮಸ್ಯೆಗಳನ್ನು ಬಿಡಿಸಲು ವೆನ್ ಚಿತ್ರಗಳನ್ನು ಉಪಯೋಗಿಸಿ.

(a) ಒಂದು ಕಾಲೇಜಿನಲ್ಲಿ 800 ವಿದ್ಯಾರ್ಥಿಗಳಲ್ಲಿ 200 ಜನರು ಭೌತಶಾಸ್ತ್ರವನ್ನೂ 300 ಜನರು ರಸಾಯನ ಶಾಸ್ತ್ರವನ್ನೂ ಮತ್ತು 50 ಜನರು ಭೌತ ಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳೆರಡನ್ನೂ ತೆಗೆದುಕೊಳ್ಳುವರು. ಭೌತಶಾಸ್ತ್ರ ಅಥವಾ ರಸಾಯನ ಶಾಸ್ತ್ರ ಎರಡನ್ನೂ ತೆಗೆದುಕೊಳ್ಳದೆ ಇರುವ ವಿದ್ಯಾರ್ಥಿಗಳ ಸಂಖ್ಯೆಯನ್ನು **ಕಂಡು ಹಿಡಿಯಿರಿ.**

(b) 250 ಜನ ಕಾಲೇಜು ವಿದ್ಯಾರ್ಥಿಗಳಲ್ಲಿ 77 ಜನ ಇಂಗ್ಲಿಷನ್ನೂ, 109 ಜನ ಅರ್ಥಶಾಸ್ತ್ರವನ್ನೂ, 75 ಜನ ಸಮಾಜ ಶಾಸ್ತ್ರವನ್ನೂ, 26 ಜನ ಇಂಗ್ಲಿಷ್ ಮತ್ತು ಅರ್ಥಶಾಸ್ತ್ರಗಳೆರಡನ್ನೂ, 24 ಜನ ಇಂಗ್ಲಿಷ್ ಮತ್ತು ಸಮಾಜ ಶಾಸ್ತ್ರಗಳೆರಡನ್ನೂ 30 ಜನ ಅರ್ಥಶಾಸ್ತ್ರ ಮತ್ತು ಸಮಾಜ ಶಾಸ್ತ್ರಗಳೆರಡನ್ನೂ, ಮತ್ತು 11 ಜನ ಈ ಮೂರೂ ವಿಷಯಗಳನ್ನೂ ತೆಗೆದುಕೊಳ್ಳುವರು. ಒಟ್ಟು 250 ವಿದ್ಯಾರ್ಥಿಗಳಲ್ಲಿ ಎಷ್ಟು ಜನ ಈ ವಿಷಯಗಳಾವುದನ್ನೂ ತೆಗೆದುಕೊಳ್ಳುವುದಿಲ್ಲ?

ಸೂಚನೆ : ಮೂರು ವಿಷಯಗಳನ್ನು ಸೂಚಿಸುವಂತೆ, ಮೂರು ವೃತ್ತಗಳಿರುವ ವೆನ್ ಚಿತ್ರವನ್ನು ರಚಿಸಿ. ಮೂರು ವೃತ್ತಗಳಿಗೆ ಸೇರಿರುವ ಪ್ರದೇಶದಲ್ಲಿ 11 ಸಂಖ್ಯೆಯನ್ನು ಬರೆದು, ಪಕ್ಕದ ಕ್ಷೇತ್ರಗಳಲ್ಲಿ ಕೊಟ್ಟಿರುವ ದತ್ತಾಂಶದಿಂದ ತಕ್ಕ ಸಂಖ್ಯೆಗಳನ್ನು ಸೇರಿಸಿರಿ.

CHAPTER 2

Number Systems

2·1 Natural Numbers—The development of mathematics began with counting and with a number system for doing this counting. The mathematical needs of the primitive man were very few. He only wanted a way of counting the few articles that he possessed. He would have certainly used the fingers of his hand and called the numbers one, two, three, etc., by some terms in his own language. As he began to acquire more articles, he must have perhaps used pebbles or stones or other things to show repetitions of fives or tens. As civilization developed, different countries introduced their own systems of counting. The system used by the Romans, indicated by I, II, III, IV, etc., is one such, but it was not suited for arithmetical calculations. In due course, the system invented in India, and called the Hindu numeral system began to be employed universally. The characteristic feature of this system is the use of nine digits, together with a symbol called zero, to denote any number whatever, by means of a place-value system of numeration.

Thus arose the natural numbers. Leopald Kronecker declared. " God made the whole numbers; man made the rest."

Indeed, these are the very numbers with which the child begins his study of arithmetic; they form the natural basis for further developments in mathematics. These numbers are called *natural numbers* or *counting*

ಅಧ್ಯಾಯ 2

ಸಂಖ್ಯಾ ವ್ಯೂಹಗಳು

2·1 ಸ್ವಾಭಾವಿಕ ಸಂಖ್ಯೆಗಳು

ಎಣಿಕೆ, ಮತ್ತು ಇದಕ್ಕಾಗಿ ಏರ್ಪಟ್ಟ ಒಂದು ಸಂಖ್ಯಾವ್ಯೂಹ—ಇವುಗಳಿಂದ ಗಣಿತ ಶಾಸ್ತ್ರದ ಬೆಳವಣಿಗೆಯು ಪ್ರಾರಂಭವಾಯಿತು. ಆದಿಮಾನವನಿಗೆ ಗಣಿತ ಸಂಬಂಧವಾದ ಆವಶ್ಯಕತೆಗಳು ತೀರಾ ಕಡಿಮೆಯಾಗಿದ್ದುವು. ಅವನಿಗೆ ತನ್ನಲ್ಲಿದ್ದ ಕೇವಲ ಕೆಲವು ವಸ್ತುಗಳನ್ನು ಎಣಿಸುವುದು ಮಾತ್ರ ಅಗತ್ಯವಿತ್ತು. ಇದಕ್ಕಾಗಿ ಅವನು ತನ್ನ ಬೆರಳು ಗಳನ್ನು ಉಪಯೋಗಿಸಿದ್ದಿರಬೇಕು ಮತ್ತು ಸಂಖ್ಯೆಗಳನ್ನು ಒಂದು, ಎರಡು, ಮೂರು. . . . ಎಂಬುದಾಗಿ ತನ್ನ ಸ್ವಂತ ಭಾಷೆಯಲ್ಲಿ ಯಾವುವೋ ಪದಗಳಿಂದ ಕರೆದಿರಬೇಕು. ತನ್ನಲ್ಲಿ ಹೆಚ್ಚು ವಸ್ತುಗಳು ಸೇರುತ್ತಾ ಬರಲಾಗಿ ಐದು ಅಥವಾ ಹತ್ತರ ಆವರ್ತನೆಗಳನ್ನು ತೋರಿಸಲು ಅವನು ಹರಳುಗಳನ್ನೋ, ಕಲ್ಲುಗಳನ್ನೋ ಅಥವಾ ಇತರ ವಸ್ತುಗಳನ್ನೋ ಬಹುಶಃ ಉಪಯೋಗಿಸಿರಬಹುದು. ನಾಗರಿಕತೆಯು ಬೆಳೆದಂತೆಲ್ಲಾ ಬೇರೆ ಬೇರೆ ದೇಶಗಳು ತಮ್ಮ ತಮ್ಮ ಎಣಿಸುವ ವಿಧಾನಗಳನ್ನು ಪ್ರಾರಂಭಿಸಿದುವು. ರೋಮನರು ಉಪಯೋಗಿಸುತ್ತಿದ್ದ *I, II, III, IV* ಇತ್ಯಾದಿ ಚಿಹ್ನೆಗಳುಳ್ಳ ಕ್ರಮವು ಇಂತಹುದೊಂದು: ಆದರೆ ಅಂಕಗಣಿತದ ಲೆಕ್ಕಾಚಾರಗಳಿಗೆ ಇದು ಅಷ್ಟು ಸರಿ ಹೊಂದಲಿಲ್ಲ. ಕಾಲಕ್ರಮೇಣ ಭಾರತದಲ್ಲಿ ನಿರ್ಮಿತವಾದ, ಹಿಂದೂ ಸಂಖ್ಯಾವ್ಯೂಹವೆಂಬ ಪದ್ಧತಿಯು ಸಾರ್ವತ್ರಿಕವಾಗಿ ಉಪಯೋಗಿಸಲ್ಪಡಲು ಪ್ರಾರಂಭವಾಯಿತು. ಯಾವ ಸಂಖ್ಯೆಯನ್ನು ನಿರೂಪಿಸಬೇಕಾದರೂ ಒಂಬತ್ತು ಅಂಕಗಳನ್ನು ಶೂನ್ಯವೆಂಬೊಂದು ಚಿಹ್ನೆಯೊಂದಿಗೆ ಯೋಜಿಸಿ. ಸ್ಥಾನದ ಬೆಲೆಯುಳ್ಳ ಒಂದು ಅಂಕಕರಣ ಪದ್ಧತಿಯನ್ನು ನಿಗದಿ ಮಾಡಿರುವುದೇ ಈ ಕ್ರಮದ ವೈಶಿಷ್ಟ್ಯವಾಗಿದೆ.

ಈ ಪ್ರಕಾರವಾಗಿ ಸ್ವಾಭಾವಿಕ ಸಂಖ್ಯೆಗಳು ಉದ್ಭವಿಸಿದುವು. ಲಿಯೋಪಾಲ್ಡ್ ಕ್ರೊನೇಕರ್ ಎಂಬಾತನು, ''ಪೂರ್ಣಾಂಕಗಳು ದೈವಕೃತ; ಬೇರೆಲ್ಲವೂ ಮಾನವ ಕೃತ'' ವೆಂದು ಸಾರಿಹೇಳಿದ್ದಾನೆ.

ವಾಸ್ತವವಾಗಿಯೂ, ಮಕ್ಕಳು ಅಂಕಗಣಿತವನ್ನು ಅಭ್ಯಸಿಸಲು ಮೊದಲು ಮಾಡುವುದಾದರೂ ಈ ಸಂಖ್ಯೆಗಳಿಂದಲೇ: ಗಣಿತದಲ್ಲಿ ಮುಂದಿನ ಬೆಳವಣಿಗೆಗೆಲ್ಲಾ ಇವು ಸ್ವಾಭಾವಿಕವಾದ ಮೂಲಾಧಾರವಾಗುತ್ತವೆ. ಈ ಸಂಖ್ಯೆಗಳನ್ನು ಸ್ವಾಭಾವಿಕ

numbers. The set of all natural numbers is denoted by N, and consists of the numbers

1, 2, 3, 4, 5, ...

Addition in the set of natural numbers—Addition is an operation by means of which we can combine any two natural numbers a and b to form a natural number denoted by the symbol $(a+b)$, and called the sum of a and b.

Thus the sum of any two natural numbers is a natural number.

e.g. $7+11=18$ snd $4+47=51$

Here 18 and 51 are natural numbers.

We describe this property of addition by saying that "the set N is closed under the operation of addition."

2.2 Zero and negative integers—On the other hand during the process of subtraction. we do not always get a natural number as the result of subtracting one number from another.

e.g.(1) $4-4 \neq$ (not equal to) a natural number.

$\therefore$ if we want to subtract a natural number from itself, we have to introduce a new number, namely, zero, denoted by the symbol 0. In fact, this is a very valuable contribution of India to the world of mathematics. We know that 0 has the property

$$x+0=x, \text{ for all } x \in I$$

e.g. (2) Again, consider $5-8$. This difference is not a natural number. We have to formulate the concept of negative numbers, in order to be able to subtract 8 from 5. We say that $5-8=-3$

ಸಂಖ್ಯೆಗಳು ಅಥವಾ ಎಣಿಕೆಯ ಸಂಖ್ಯೆಗಳು ಎನ್ನುತ್ತೇವೆ. ಎಲ್ಲಾ ಸಾಭಾವಿಕ ಸಂಖ್ಯೆಗಳ ಗಣವನ್ನು N ಎಂದು ನಿರೂಪಿಸುತೇವೆ ; ಇದು

1, 2, 3, 4, 5, ...

ಮುಂತಾದ ಸಂಖೆಗಳನ್ನೊಳಗೊಂಡಿದೆ.

ಸ್ವಾಭಾವಿಕ ಸಂಖ್ಯೆಗಳ ಗಣದಲ್ಲಿ ಸಂಕಲನ

a, b ಗಳೆಂಬ ಯಾವುದಾದರೂ ಎರಡು ಸ್ವಾಭಾವಿಕ ಸಂಖ್ಯೆಗಳನ್ನು ಸಂಯೋಜಿಸಿ, ಅವುಗಳ ಮೊತ್ತವೆಂದು ಹೇಳಲಾಗುವ $(a+b)$ ಎಂಬ ಒಂದು ಸ್ವಾಭಾವಿಕ ಸಂಖ್ಯೆಯನ್ನು ಪಡೆಯುವ ಒಂದು ಪರಿಕರ್ಮವೇ ಸಂಕಲನ.

ಆದಕಾರಣ, ಎರಡು ಸಾಭಾವಿಕ ಸಂಖ್ಯೆಗಳ ಮೊತ್ತವೂ ಒಂದು ಸ್ವಾಭಾವಿಕ ಸಂಖ್ಯೆಯೇ ಆಗಿರುತ್ತದೆ.

ಉದಾ : $7+11=18$ ಮತ್ತು $4+47=51$

ಇಲ್ಲಿ 18 ಮತ್ತು 51 ಸ್ವಾಭಾವಿಕ ಸಂಖ್ಯೆಗಳು, ಸಂಕಲನದ ಈ ಒಂದು ಗುಣವನ್ನು "N ಎಂಬ ಗಣವು ಸಂಕಲನದ ಪರಿಕರ್ಮದಲ್ಲಿ ಆವೃತಗೊಂಡಿದೆ" ಎಂದು ವಿವರಿಸುತ್ತೇವೆ.

2·2 ಶೂನ್ಯ, ಮತ್ತು ಋಣ ಪೂರ್ಣಾಂಕಗಳು

ಇದಕ್ಕೆ ವಿರುದ್ಧವಾಗಿ, ವ್ಯವಕಲನ ಕಾರ್ಯದಲ್ಲಿ, ಒಂದು ಸ್ವಾಭಾವಿಕ ಸಂಖ್ಯೆಯಿಂದ ಮತ್ತೊಂದನ್ನು ಕಳೆಯುವಾಗ, ಪ್ರತಿಸಾರಿಯೂ ಸ್ವಾಭಾವಿಕ ಸಂಖ್ಯೆಯೇ ಫಲಿಸುವುದಿಲ್ಲ.

ಉದಾ. (1) : $4-4$ ಒಂದು ಸ್ವಾಭಾವಿಕ ಸಂಖ್ಯೆಯನ್ನು ಕೊಡುವುದಿಲ್ಲ. ಒಂದು ಸ್ವಾಭಾವಿಕ ಸಂಖ್ಯೆಯನ್ನು ಅದರಿಂದಲೇ ಕಳೆಯಬೇಕಾದಲ್ಲಿ ಶೂನ್ಯವೆಂಬ, 0 ಸಂಜ್ಞೆಯಿಂದ ನಿರೂಪಿಸಲ್ಪಡುವ ಹೊಸ ಸಂಖ್ಯೆಯೊಂದನ್ನು ತಂದುಕೊಳ್ಳಬೇಕಾಗುತ್ತದೆ. ವಾಸ್ತವವಾಗಿ, ಇದು ಗಣಿತ ಪ್ರಪಂಚಕ್ಕೆ ಭಾರತವು ನೀಡಿದ ಅತಿ ಅಮೂಲ್ಯವಾದ ಕಾಣಿಕೆಯಾಗಿದೆ.

$x \in I$ ಆಗುವ ಎಲ್ಲಾ x ಗಳಿಗೂ, $x+0=x$ ಎಂದಾಗುವ ಗುಣವನ್ನು ಈ 0 ಯು ಹೊಂದಿದೆ.

ಉದಾ. (2) : ಈಗ 5—8 ಎಂಬುದನ್ನು ತೆಗೆದುಕೊಳ್ಳೋಣ. ಇವುಗಳ ವ್ಯತ್ಯಾಸವು ಒಂದು ಸ್ವಾಭಾವಿಕ ಸಂಖ್ಯೆಯಲ್ಲ. 5 ರಿಂದ 8 ನ್ನು ಕಳೆಯಬೇಕಾದರೆ, ಋಣಸಂಖ್ಯೆಗಳೆಂಬ ಭಾವನೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ.

$5-8=-3$ ಎಂದು ಬರೆಯುತ್ತೇವೆ.

In fact, corresponding to each natural number, we can form the respective negative number. Thus $-1, -2, -3, -4, \ldots\ldots\ldots\ldots$ are the negative numbers corresponding to the natural numbers $\{1, 2, 3, 4, \ldots\ldots\ldots\ldots\}$. We call the numbers $-1, -2, -3, -4, \ldots\ldots\ldots\ldots$ negative integers and $1, 2, 3, 4, \ldots\ldots\ldots$ positive integers.

The set consisting of all negative integers, zero, and all positive integers is called the set of integers.

$\therefore\ I = \{\ldots\ldots, -3, -2, -1, 0, 1, 2, 3, \ldots\ldots\}$

In fact, in the set of integers, an equation of the form $x+a=0$, where $a \in I$, can always be solved.

Further, it is clear that the sum and difference of any two integers is an integer. $\therefore I$ is closed under addition and subtraction.

2.3 Multiplication in the set of integers—Multiplication may be regarded as repeated addition :

e.g. $7 \times 4 = 7+7+7+7 = 28$

$(-8) \times 3 = (-8)+(-8)+(-8) = 24$

It may be recalled that we use the convention of signs

$$(+m) \times (+n) = +mn$$
$$(-m) \times (+n) = -mn = (+m) \times (-n)$$
$$(-m) \times (-n) = +mn$$

where m and n are any two positive integers. We remember that :

$$0 + x = 0 = x + 0 \text{ for all } x \in I$$

It is thus seen that the product of any two integers is an integer ; in other words, the set I is closed under multiplication.

ವಾಸ್ತವವಾಗಿ, ಒಂದೊಂದು ಸ್ವಾಭಾವಿಕ ಸಂಖ್ಯೆಗೂ ಅನುಗುಣವಾಗಿ ಒಂದೊಂದು ಋಣಸಂಖ್ಯೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ, $-1, -2, -3, -4 \ldots$ ಎಂಬ ಋಣಸಂಖ್ಯೆಗಳು $\{1, 2, 3, 4, \ldots\}$ ಎಂಬ ಸ್ವಾಭಾವಿಕ ಸಂಖ್ಯೆಗಳಿಗೆ ಪರಸ್ಪರ ಅನುಗುಣವಾಗಿವೆ. $-1, -2, -3, -4, \ldots\ldots$ ಎಂಬ ಸಂಖ್ಯೆಗಳನ್ನು ಋಣ ಪೂರ್ಣಾಂಕಗಳೆಂದೂ, $1, 2, 3, 4, \ldots\ldots$ ಗಳನ್ನು ಧನ ಪೂರ್ಣಾಂಕಗಳೆಂದೂ ಕರೆಯುತ್ತೇವೆ.

ಋಣಪೂರ್ಣಾಂಕಗಳು, ಶೂನ್ಯ ಮತ್ತು ಧನಪೂರ್ಣಾಂಕಗಳು ಇವೆಲ್ಲವನ್ನೂ ಒಳಗೊಂಡ ಗಣವನ್ನು ಪೂರ್ಣಾಂಕಗಳ ಗಣವೆಂದು ಹೇಳುತ್ತೇವೆ.

$$\therefore I = \{\ldots, -3, -2, -1, 0, 1, 2, 3. \ldots\ldots\}$$

ವಾಸ್ತವವಾಗಿ, a ಪೂರ್ಣಾಂಕವಾಗಿದ್ದರೆ, $x+a=0$ ರೂಪದಲ್ಲಿರುವ ಯಾವ ಸಮೀಕರಣವನ್ನಾದರೂ ಪೂರ್ಣಾಂಕಗಳ ಗಣದಲ್ಲಿ ಬಿಡಿಸಬಹುದು. ಮತ್ತೆ, ಎರಡು ಪೂರ್ಣಾಂಕಗಳ ಮೊತ್ತವೂ, ಅವುಗಳ ವ್ಯತ್ಯಾಸವೂ ಪೂರ್ಣಾಂಕಗಳೇ ಆಗಿರುತ್ತವೆಯೆಂದು ವ್ಯಕ್ತವಾಗುತ್ತದೆ.

2.3 ಪೂರ್ಣಾಂಕಗಳ ಗಣದಲ್ಲಿ ಗುಣಾಕಾರ

ಪುನರಾವರ್ತಿಸಿದ ಸಂಕಲನವನ್ನೇ ಗುಣಾಕಾರವೆಂದು ಪರಿಗಣಿಸಬಹುದು.

ಉದಾ. : $7 \times 4 = 7+7+7+7 = 28$

$(-8) \times 3 = (-8) + (-8) + (-8) = -24$

m, n ಗಳು ಧನಪೂರ್ಣಾಂಕಗಳಾದರೆ,

$$(+m) \times (+n) = +mn$$

$$(-m) \times (+n) = -mn = (+m) \times (-n)$$

$$(-m) \times (-n) = +mn$$

ಎಂಬ ಚಿಹ್ನೆಗಳನ್ನು ರೂಢಿಯಲ್ಲಿ ಉಪಯೋಗಿಸುತ್ತೇವೆಂದು ಇಲ್ಲಿ ಜ್ಞಾಪಿಸಿಕೊಳ್ಳೋಣ. $x \in I$ ಆಗುವ x ಗಳಿಗೆಲ್ಲಾ, $0 \times x = 0 = x \times 0$ ಎಂದು ನೆನೆಸಿಕೊಳ್ಳೋಣ.

ಇದರಿಂದ, ಎರಡು ಪೂರ್ಣಾಂಕಗಳ ಗುಣಲಬ್ಧವು ಪೂರ್ಣಾಂಕವಾಗಿಯೇ ಇರುತ್ತದೆಯೆಂದು ಗೊತ್ತಾಗುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಗುಣಾಕಾರದ ಬಗ್ಗೆ, I ಎಂಬ ಗಣವು ಆವೃತವಾಗಿದೆ ಎನ್ನಬಹುದು.

2.4 Division in the set of integers—Division of an integer a by an integer $b(\neq o)$, does not always give an integer.

$$e.g. \text{ while } \frac{28}{7} = 4, \ \frac{25}{6} \neq \text{ an integer}$$

Thus, division will not always be possible in the set of integers only. In fact, this operation generates fractions in a natural way. With their introduction into the present number system, division becomes possible in all cases, where the divisor $\neq 0$.

Now our number system consists of all integers and all fractions. This new system is called the set of *Rational Numbers*, and will be denoted by the symbol Q.

If $x \in Q$, it can always be expressed in the form of a ratio $\frac{p}{q}$, where p and q are integers, and $q \neq o$. This is the reason why Q is called the set of *rational* numbers. In fact this property is taken as the definition of a rational number.

Definition : A rational number is one which can be expressed in the form $\frac{p}{q}$ *where* p *and* q *are integers,* $q \neq 0$.

$$e.g. \ -4 = \frac{-4}{1}, \ 3 = \frac{3}{1}, \ 4\tfrac{1}{2} = \frac{9}{2},$$

$$0 = \frac{0}{a} \text{ where } a \neq o, \ a \in I., \text{ etc.}$$

Note—This representation is not unique ;

$$\text{for we may write } 3 = \frac{3}{1} = \frac{9}{3} = \frac{24}{8} \text{ etc.}$$

2.4 ಪೂರ್ಣಾಂಕಗಳ ಗಣದಲ್ಲಿ ಭಾಗಾಕಾರ

a ಎಂಬೊಂದು ಪೂರ್ಣಾಂಕವನ್ನು $b(\neq 0)$ ಎಂಬೊಂದು ಪೂರ್ಣಾಂಕದಿಂದ ಭಾಗಿಸಿದರೆ ಯಾವಾಗಲೂ ಪೂರ್ಣಾಂಕವೇ ಲಭಿಸುವುದಿಲ್ಲ.

ಉದಾ. : $\frac{28}{7} = 4$ ಆದರೂ $\frac{25}{6}$ ಪೂರ್ಣಾಂಕವಲ್ಲ

ಹೀಗಾಗಿ, ಪೂರ್ಣಾಂಕಗಳ ಗಣದಲ್ಲಿ ಎಲ್ಲಾ ಸಂದರ್ಭಗಳಲ್ಲೂ ಭಾಗಿಸಲಾಗುವುದಿಲ್ಲ. ವಾಸ್ತವವಾಗಿ, ಈ ಪರಿಕರ್ಮವು ಭಿನ್ನರಾಶಿಗಳನ್ನು ಸ್ವಾಭಾವಿಕವಾದ ರೀತಿಯಲ್ಲಿ ಉಂಟುಮಾಡುತ್ತದೆ. ಪ್ರಸ್ತುತ ಸಂಖ್ಯಾವ್ಯೂಹದೊಳಕ್ಕೆ ಇವು ಪ್ರವೇಶಿಸಿದೊಡನೆಯೇ, ಭಾಜಕವು 0 ಅಲ್ಲದ ಎಲ್ಲಾ ಸಂದರ್ಭಗಳಲ್ಲೂ ಭಾಗಾಕಾರವು ಸಾಧ್ಯವಾಗುತ್ತದೆ.

ಈಗ ನಮ್ಮ ಸಂಖ್ಯಾವ್ಯೂಹವು ಎಲ್ಲಾ ಪೂರ್ಣಾಂಕಗಳನ್ನೂ ಭಿನ್ನರಾಶಿಗಳನ್ನೂ ಒಳಗೊಂಡಿದೆ. ಈ ಹೊಸ ವ್ಯೂಹವನ್ನು ಭಾಗಲಬ್ಧ ಸಂಖ್ಯೆಗಳ ಗಣವೆಂದು ಕರೆಯುತ್ತೇವೆ, ಮತ್ತು ಇದನ್ನು Q ಎಂದು ನಿರೂಪಿಸುತ್ತೇವೆ.

$x \in Q$ ಆದರೆ, xನ್ನು p, qಗಳು ಪೂರ್ಣಾಂಕಗಳಾಗಿಯೂ, $q \neq o$ ಇರುವಂತೆ

$x = \frac{p}{q}$ ಎಂಬುದಾಗಿ, ಒಂದು ಭಾಗಲಬ್ಧದರೂಪದಲ್ಲಿ ವ್ಯಕ್ತಪಡಿಸಬಹುದು. ಈ ಕಾರಣಕ್ಕಾಗಿಯೇ Qವನ್ನು ಭಾಗಲಬ್ಧ ಸಂಖ್ಯೆಗಳ ವ್ಯೂಹವೆನ್ನುವುದು. ವಾಸ್ತವದಲ್ಲಿ ಭಾಗಲಬ್ಧ ಸಂಖ್ಯೆಯ ವ್ಯಾಖ್ಯೆಯೇ ಈ ಗುಣವನ್ನು ಅವಲಂಬಿಸಿದೆ.

ವ್ಯಾಖ್ಯೆ: p, qಗಳು ಪೂರ್ಣಾಂಕಗಳಾಗಿಯೂ, $q \neq 0$ ಆಗಿದ್ದು, $\frac{p}{q}$ ರೂಪದಲ್ಲಿ ವ್ಯಕ್ತಪಡಿಸಬಹುದಾದ ಸಂಖ್ಯೆಗಳನ್ನು ಭಾಗಲಬ್ಧ ಸಂಖ್ಯೆಗಳೆಂದು ಕರೆಯುತ್ತೇವೆ.

ಉದಾ: $-4 = \frac{-4}{1}$; $3 = \frac{3}{1}$; $4\frac{1}{2} = \frac{9}{2}$

$0 = \frac{0}{a}$ $(a \neq 0)$, $a \in I$, ಇತ್ಯಾದಿ.

ಗಮನಿಸಿ: ಈ ರೀತಿಯ ನಿರೂಪಣೆಯು ಏಕೈಕವಲ್ಲ ;

ಏಕೆಂದರೆ, $3 = \frac{3}{1} = \frac{9}{3} = \frac{24}{8}$ ಎಂದು ಮುಂತಾಗಿ ಬರೆಯಬಹುದು.

Notice that Q is closed under the fundamental operations : addition, subtraction, multiplication and division. In fact, we can always solve an equation of the form $ax+b=o$, where $a, b \in Q, a \neq o$, getting the solution $x = -\dfrac{b}{a} \in Q$.

2.5 Irrational numbers—Next let us consider the solution of quadratic equations. An equation such as $x^2-5x+6=0$ or $(x-2)(x-3)=0$ has solutions $x=2$ and $x=3$ which are rational numbers.

However, if we take the equation $x^2=2$, its solutions are given by $x= \pm \sqrt{2}$.

But it can be easily proved that $\sqrt{2}$ is not rational.

Proof : Suppose that $\sqrt{2}$ is rational. Then it can be expressed in the form $\dfrac{p}{q}$ where p and q are integers, and $q \neq 0$. We may further suppose that p and q have no common factors except ± 1.

$$\text{Now } \frac{p}{q} = \sqrt{2}$$

Squaring on both sides, $\dfrac{p^2}{q^2} = 2$ or $p^2 = 2q^2$.

$\therefore$ p^2 is an even number, $\therefore$ p is an even number

Let $p=2m$ $\quad \therefore \quad (2m)^2=4m^2=2q^2$

$\therefore \quad q^2=2m^2$

$\therefore \quad q^2$ is even, $\quad \therefore$ q is even.

Thus both p and q are even. $\therefore$ p and q have 2 as a common factor, which is contrary to the assumption that p and q have no common factor except ± 1

ಸಂಕಲನ, ವ್ಯವಕಲನ, ಗುಣಾಕಾರ ಮತ್ತು ಭಾಗಾಕಾರಗಳೆಂಬ ಮೂಲ ಪರಿಕರ್ಮಗಳಲ್ಲಿ Q ಆವೃತವಾಗಿದೆಯೆಂಬುದನ್ನು ಗಮನಿಸಿ. ವಾಸ್ತವದಲ್ಲಿ $a, b \in Q$ ಮತ್ತು $a \neq 0$ ಆಗಿದ್ದರೆ; $ax+b=0$ ರೂಪದಲ್ಲಿರುವ ಸಮೀಕರಣವನ್ನು ಬಿಡಿಸಿ ಪ್ರತಿಸಾರಿಯೂ $x \in Q$ ಇರುವಂತಹ ಮೂಲವನ್ನು ಪಡೆಯಬಹುದು.

ಇಲ್ಲಿ $x = -\frac{b}{a} \in Q$.

2.5 ಅಭಾಗಲಬ್ಧ ಸಂಖ್ಯೆಗಳು

ಇನ್ನು ವರ್ಗಸಮೀಕರಣಗಳ ಬಿಡಿಸುವಿಕೆಯನ್ನು ತೆಗೆದುಕೊಳ್ಳೋಣ. $x^2-5x+6=0$ ಅಥವಾ $(x-2)(x-3)=0$ ರೂಪದಲ್ಲಿರುವ ಒಂದು ಸಮೀಕರಣಕ್ಕೆ ಭಾಗಲಬ್ಧ ಸಂಖ್ಯೆಗಳಾದ $x=2$, $x=3$ ಎಂಬ ಮೂಲಗಳೇನೋ ಇರುತ್ತವೆ. ಆದರೆ, $x^2=2$ ಎಂಬ ಸಮೀಕರಣವನ್ನು ತೆಗೆದುಕೊಂಡಾಗ ಅದರ ಮೂಲಗಳು $x = \pm\sqrt{2}$ ಎಂದಾಗುತ್ತವೆ. ಆದರೆ $\sqrt{2}$ ಎಂಬುದು ಭಾಗಲಬ್ಧ ಸಂಖ್ಯೆಯಲ್ಲವೆಂಬುದು ಸುಲಭವಾಗಿ ಗೊತ್ತಾಗುತ್ತದೆ.

ಸಾಧನೆ :— $\sqrt{2}$ ಭಾಗಲಬ್ಧ ಸಂಖ್ಯೆಯೆಂದು ಭಾವಿಸೋಣ. ಆಗ, ಅದನ್ನು $\frac{p}{q}$ ಎಂದು ಒಂದು ಭಾಗಲಬ್ಧದ ರೀತಿಯಲ್ಲಿ ನಿರೂಪಿಸಬಹುದು ; ಇಲ್ಲಿ p ಮತ್ತು qಗಳು ಪೂರ್ಣಾಂಕಗಳು ಮತ್ತು $q \neq 0$. $\frac{p}{q}$ ಎಂಬ ಭಿನ್ನ ರಾಶಿಯು ಕನಿಷ್ಠ ರೂಪದಲ್ಲಿದೆಯೆಂದೂ ಸಹ ಭಾವಿಸಬಹುದು ; ಎಂದರೆ, p ಮತ್ತು qಗಳಿಗೆ ± 1 ವಿನಾ ಬೇರೆ ಯಾವ ಸಾಮಾನ್ಯ ಅಪವರ್ತನಗಳೂ ಇಲ್ಲ.

ಈಗ $\frac{p}{q} = \sqrt{2}$

ಎರಡು ಕಡೆಗಳನ್ನೂ ವರ್ಗಿಸಿದರೆ,

$\frac{p^2}{q^2} = 2$ ಅಥವಾ $p^2 = 2q^2$

$\therefore p^2$ ಎಂಬುದು ಒಂದು ಸಮಸಂಖ್ಯೆ. $p=2m$ ಆಗಿರಲಿ.

$\therefore (2m)^2 = 4m^2 = 2q^2$.

$\therefore q^2 = 2m^2$ $\therefore q^2$ ಒಂದು ಸಮಸಂಖ್ಯೆ $\therefore q$ ಒಂದು ಸಮಸಂಖ್ಯೆ. ಹೀಗೆ, p ಮತ್ತು qಗಳೆರಡು ಸಮಸಂಖ್ಯೆಗಳಾಗುತ್ತವೆ, ಎಂದ ಮೇಲೆ p, qಗಳಿಗೆ

$\therefore$ Our assumption that $\sqrt{2}$ is rational must be false. $\therefore$ $\sqrt{2}$ is not rational.

Thus we find that there are numbers which are not rational ; we call them *irrational* numbers.

Examples of other irrational numbers are

$$\sqrt[3]{} \quad \sqrt{6},\ 2+\sqrt{3},\ \text{etc.}$$

The number π, representing the ratio of the length of the circumference of any circle to its diameter, is also irrational.

2.6 **Real Numbers**--The set of all rational and irrational numbers form the set of REAL numbers, and this set is denoted by R.

Decimal Representation—(*a*) We shall first consider decimal representation of rational numbers. Given any rational number $\frac{p}{q}$ $(q \neq o)$, by division of p by q. it is possible to develop $\frac{p}{q}$ into a decimal.

$$e.g.\ \frac{3}{2} = 1.5$$

$$\frac{3}{4} = 0.75$$

$$\frac{1}{3} = 0.3333\ldots\ldots\ldots\ldots$$

$$\frac{1}{6} = 0.1666\ldots\ldots$$

$$\frac{5}{11} = 0.454545\ldots\ldots\ldots$$

2 ಸಾಮಾನ್ಯ ಅಪವರ್ತನವಾಯಿತು. ಆದರೆ, ಇದು p, q ಗಳಿಗೆ ± 1 ವಿನಾ ಬೇರೆ ಯಾವ ಸಾಮಾನ್ಯ ಅಪವರ್ತನವೂ ಇಲ್ಲವೆಂಬ ಪೂರ್ವಪಕ್ಷಕ್ಕೆ ವಿರೋಧವಾಗಿದೆ.

$\therefore \sqrt{2}$ ಒಂದು ಭಾಗಲಬ್ಧ ಸಂಖ್ಯೆ ಎಂಬ ನಮ್ಮ ಭಾವನೆ ತಪ್ಪಾಗಿರಬೇಕು. $\therefore \sqrt{2}$ ಭಾಗಲಬ್ಧ ಸಂಖ್ಯೆಯಲ್ಲ.

ಇದರಿಂದ ಭಾಗಲಬ್ಧ ಸಂಖ್ಯೆಗಳಲ್ಲದ ಸಂಖ್ಯೆಗಳೂ ಇವೆ ಎಂದು ವ್ಯಕ್ತವಾಗುತ್ತದೆ. ಈ ಸಂಖ್ಯೆಗಳನ್ನು ಅಭಾಗಲಬ್ಧ ಸಂಖ್ಯೆಗಳೆಂದು ಕರೆಯೋಣ.

$\sqrt[3]{5}, \sqrt{6}, 2+\sqrt{3}$ ಇತ್ಯಾದಿಗಳು ಅಭಾಗಲಬ್ಧ ಸಂಖ್ಯೆಗಳ ಇತರ ಉದಾಹರಣೆಗಳು.

ಒಂದು ವೃತ್ತದ ಪರಿಧಿಗೂ ಅದರ ವ್ಯಾಸಕ್ಕೂ ಇರುವ ಪ್ರಮಾಣವನ್ನು ಸೂಚಿಸುವ π ಎಂಬ ಸಂಖ್ಯೆಯೂ ಅಭಾಗಲಬ್ಧ ಸಂಖ್ಯೆಯೇ.

2.6 ವಾಸ್ತವ ಸಂಖ್ಯೆಗಳು

ಎಲ್ಲಾ ಭಾಗಲಬ್ಧ ಸಂಖ್ಯೆಗಳನ್ನೂ ಅಭಾಗಲಬ್ಧ ಸಂಖ್ಯೆಗಳನ್ನೂ ಒಳಗೊಂಡ ಗಣವನ್ನು ವಾಸ್ತವ ಸಂಖ್ಯೆಗಳ ಗಣವೆಂದು ಕರೆಯುತ್ತೇವೆ, ಮತ್ತು ಅದನ್ನು R ಎಂಬ ಚಿಹ್ನೆಯಿಂದ ನಿರೂಪಿಸುತ್ತೇವೆ.

ದಶಮಾಂಶ ರೀತಿಯಲ್ಲಿ ನಿರೂಪಣೆ

(*a*) ಮೊದಲು ಭಾಗಲಬ್ಧ ಸಂಖ್ಯೆಗಳನ್ನು ದಶಮಾಂಶ ರೀತಿಯಲ್ಲಿ ವ್ಯಕ್ತಪಡಿಸುವಿಕೆಯನ್ನು ವಿಚಾರ ಮಾಡೋಣ. $\frac{p}{q}$, $(q \neq 0)$ ಎಂಬ ಭಾಗಲಬ್ಧ ಸಂಖ್ಯೆಯಲ್ಲಿ p ಯನ್ನು q ನಿಂದ ಭಾಗಿಸುವುದರ ಮೂಲಕ, ಇದನ್ನು ಒಂದು ದಶಮಾಂಶದಂತೆ ಬರೆಯಬಹುದು.

ಉದಾ: $\frac{3}{2} = 1.5$

$\frac{3}{4} = 0.75$

$\frac{1}{3} = 0.3333 \ldots\ldots$

$\frac{1}{6} = 0.1666 \ldots\ldots$

$\frac{5}{11} = 0.454545 \ldots\ldots$

From these examples, we find that rational numbers can be expressed in the form of either a terminating or a recurring decimal.

We may next point out that any terminating or periodic decimal can be converted into the form of a ratio $\frac{p}{q}$ where $p, q \in I, q \neq 0$.

Example—(1) Consider 72.052

Now $72.052 = 72 + \frac{052}{1000} = 72 + \frac{52}{1000} = \frac{72052}{1000}$ which is in the form $\frac{p}{q}$.

(2) Consider $x = 82.4267676767 \ldots\ldots$

$$10000\,x = 824267.676767 \ldots\ldots$$

$$100\,x = 8242.676767 \ldots\ldots$$

Subtracting $9900\,x = 816025.000000 \ldots\ldots$

$\therefore\ x = \frac{816025}{9900}$ which is in the form $\frac{p}{q}$

We may further note that any terminating decimal can be expressed as a periodic decimal.

e.g Let $x = 8.4$

Now if $y = 8.39999 \ldots\ldots$

$10y = 83.9999 \ldots\ldots$

$y = 8.3999 \ldots\ldots$

Subtracting we get, $9y = 75.6$

$\therefore\ y = 8.4 = x$

ಈ ಉದಾಹರಣೆಗಳಿಂದ ಭಾಗಲಬ್ಧ ಸಂಖ್ಯೆಗಳನ್ನು ಪರ್ಯಾಪ್ತ ಅಥವಾ ಆವರ್ತ ದಶಮಾಂಶಗಳ ಮೂಲಕ ವ್ಯಕ್ತಪಡಿಸಬಹುದೆಂದು ತಿಳಿಯುತ್ತದೆ.

ಪರ್ಯಾಪ್ತ ಅಥವಾ ಆವರ್ತ ದಶಮಾಂಶವಾವುದನ್ನೇ ಆಗಲಿ, $p,q \in I$ $q \neq 0$ ಇರುವಂತೆ, $\frac{p}{q}$ ಎಂದು ಒಂದು ಪ್ರಮಾಣದ ರೂಪದಲ್ಲಿ ವ್ಯಕ್ತಪಡಿಸಬಹುದೆಂದು ಸೂಚಿಸುತ್ತೇವೆ.

ಉದಾ: (1) 72.052ನ್ನು ತೆಗೆದುಕೊಳ್ಳಿ.

ಈಗ, $72.052 = 72 + \frac{052}{1000} = 72 + \frac{52}{1000} = \frac{72052}{1000}$

ಇದು $\frac{p}{q}$ ಎಂಬ ರೂಪದಲ್ಲಿದೆ.

(2) $x = 82.4267676767\ .\ .\ .$ ನ್ನು ತೆಗದುಕೊಳ್ಳಿ.

$$10000x = 824267.676767\ .\ .\ .\ .\ .$$

ಕಳೆದರೆ, $$100x = 8242.676767\ .\ .\ .\ .\ .$$

$$9900x = 816025.000000$$

$\therefore x = \frac{816025}{9900}$, ಇದು $\frac{p}{q}$ ಎಂಬ ರೂಪದಲ್ಲಿದೆ.

ಮುಕ್ತಾಯಗೊಳ್ಳುವ ಯಾವುದೊಂದು ದಶಮಾಂಶವನ್ನೇ ಆಗಲಿ ಒಂದು ಆವರ್ತ ದಶಮಾಂಶದ ರೂಪದಲ್ಲಿ ವ್ಯಕ್ತಪಡಿಸಬಹುದೆಂಬುದನ್ನು ಈಗ ಗಮನಿಸಿ.

ಉದಾ : $x = 8.4$ ಎಂದಿರಲಿ

$y = 8.399999\ .\ .\ .\ .$ ಎನ್ನೋಣ.

$$\therefore 10y = 83.9999\ .\ .\ .\ .$$

$$y = 8.3999\ .\ .\ .\ .$$

ಕಳೆಯಲಾಗಿ, $9y = 75.6$

$$\therefore y = 8.4 = x$$

Similarly, we may write :

$$7.5 = 7.499999\ldots\ldots\ldots$$

$$8.01 = 8.009999\ldots\ldots\ldots$$

Thus all terminating decimals can be easily expressed as periodic decimals.

Therefore, any rational number can be expressed as a periodic decimal.

(*b*) It is found that irrational numbers yield non-periodic infinite decimals, when they are expressed as decimals.

e.g. $\sqrt{2} = 1.4142136\ldots\ldots\ldots$

$\sqrt{3} = 1.73205080\ldots\ldots\ldots$

$\pi = 3.14159265358\ldots\ldots\ldots$

Each of these is a non-periodic infinite decimal.

Thus we find that any real number can be expressed by means of a decimal; those real numbers whose decimal expressions are periodic (or terminating) are rational numbers, and those which are given by non-periodic infinite decimals are irrational numbers.

Exercises 2.1

(1) Express the following rational numbers in the decimal form :

$$\frac{4}{25}, \frac{3}{40}, \frac{1}{16}, \frac{1}{80}, \frac{4}{7}, \frac{3}{11}, \frac{3}{13}, \frac{5}{17}.$$

ಇದೇ ಪ್ರಕಾರ,

$$7.5 = 7.49999 \ldots\ldots$$

$$8{\cdot}01 = 8{\cdot}0099999 \ldots\ldots$$

ಎಂದೂ ಬರೆಯಬಹುದು.

ಹೀಗೆ, ಪ್ರರ್ಯಾಪ್ತ ದಶಮಾಂಶಗಳನ್ನೆಲ್ಲಾ ಆವರ್ತದಶಮಾಂಶಗಳ ರೂಪದಲ್ಲಿ ಸುಲಭವಾಗಿ ಬರೆಯಬಹುದು. ಆದುದರಿಂದ, ಯಾವ ಭಾಗಲಬ್ಧ ಸಂಖ್ಯೆಯನ್ನೇ ಆಗಲಿ, ಒಂದು ಆವರ್ತ ದಶಮಾಂಶದ ರೂಪದಲ್ಲಿ ಬರೆಯಬಹುದು.

(*b*) ಅಭಾಗಲಬ್ಧ ಸಂಖ್ಯೆಗಳ ದಶಮಾಂಶ ನಿರೂಪಣೆಯು ಯಾವಾಗಲೂ ಆವರ್ತಿಸದ ಅಪರ್ಯಾಪ್ತ ದಶಮಾಂಶಗಳನ್ನು ಕೊಡುತ್ತದೆ ಎಂಬುದನ್ನು ಕಾಣಬಹುದು.

ಉದಾ :

$$\sqrt{2} = 1.4142136\ldots\ldots\ldots$$

$$\sqrt{3} = 1.73205080\ldots\ldots\ldots$$

$$\pi = 3.14159265358\ldots\ldots\ldots$$

ಇವುಗಳಲ್ಲಿ ಒಂದೊಂದೂ ಆವರ್ತಿಸದ ಅಪರ್ಯಾಪ್ತ ದಶಮಾಂಶವಾಗಿದೆ. ಹೀಗೆ, ಎಲ್ಲಾ ವಾಸ್ತವ ಸಂಖ್ಯೆಗಳನ್ನೂ, ದಶಮಾಂಶಗಳ ಮೂಲಕ ವ್ಯಕ್ತಪಡಿಸಬಹುದೆಂದು ತಿಳಿಯುತ್ತೇವೆ ; ಯಾವ ಯಾವ ವಾಸ್ತವ ಸಂಖ್ಯೆಗಳನ್ನು ಆವರ್ತ ದಶಮಾಂಶಗಳಿಂದ (ಅಥವಾ ಪರ್ಯಾಪ್ತ ದಶಮಾಂಶಗಳಿಂದ) ನಿರೂಪಿಸಬಹುದೋ ಅವು ಭಾಗಲಬ್ಧ ಸಂಖ್ಯೆಗಳಾಗಿರುತ್ತವೆ, ಮತ್ತು ಯಾವುವನ್ನು ಆವರ್ತಿಸದ, ಅಪರ್ಯಾಪ್ತ ದಶಮಾಂಶಗಳಿಂದಲೇ ನಿರೂಪಿಸಬೇಕಾಗುತ್ತದೋ, ಅವು ಅಭಾಗಲಬ್ಧ ಸಂಖ್ಯೆಗಳಾಗಿರುತ್ತವೆ.

ಅಭ್ಯಾಸ 2.1

1 ಮುಂದಿನ ಭಾಗಲಬ್ಧ ಸಂಖ್ಯೆಗಳನ್ನು ದಶಮಾಂಶರೂಪದಲ್ಲಿ ಬರೆಯಿರಿ.

$$\frac{4}{25}, \frac{3}{40}, \frac{1}{16}, \frac{1}{80}, \frac{3}{11}, \frac{3}{13}, \frac{5}{17}.$$

2 Express the following decimals in the form

$\frac{p}{q}$, $p, q \in I$, $(q \neq o)$.

(i) 72.05 (ii) 0.0014 (iii) 11.5003

(iv) 5.0667667667....................

(v) 13.461461461....................

(vi) 11.7032260322603226........

3 Prove that $\sqrt{3}$ is irrational.

2.7. The Number Line.—There is a convenient way of representing numbers by means of points on a straight line. A line l is drawn, which is extended indefinitely on both sides. (Fig. 2·1)



Fig. 2.1

A point O is taken on l. This divides the line into two half lines : OX lying to the right side of O, and OX' to its left side. The point O, called the origin, serves to represent the number 0. We next step off segments $OA = AB = BC = \ldots = 1$ unit of length to the right of O and $OA' = A'B' = B'C' = \ldots = 1$ unit of length to its left.

Then the points A, B, C, D, ... are used to represent the positive integers 1, 2, 3, ...and the points A', B', C', D', ...to represent the negative integers —1, —2, —3, ... This line l is called the *number line*.

2 ಮುಂದಿನ ದಶಮಾಂಶಗಳನ್ನು $p,\ q \in I,\ (q \neq 0)$ ಆಗಿರುವಂತೆ, $\frac{p}{q}$ ಎಂಬ ರೂಪದಲ್ಲಿ ಬರೆಯಿರಿ.

(i) 72·05 (ii) 0·0014 (iii) 11·5003

(iv) 5·0667667667................

(v) 13·461461461...............


(vi) 11.70322603226032226...............

3 $\sqrt{3}$ ಅಭಾಗಲಬ್ಧ ಸಂಖ್ಯೆಯೆಂದು ಸಾಧಿಸಿರಿ.

2.7 ಸಂಖ್ಯಾರೇಖೆ

ಸಂಖ್ಯೆಗಳನ್ನು ಒಂದು ಸರಳರೇಖೆಯಮೇಲೆ ಬಿಂದುಗಳ ಮೂಲಕ ವ್ಯಕ್ತಪಡಿಸುವ ಒಂದು ಸುಲಭ ಮಾರ್ಗವಿದೆ.

ಎರಡೂ ಕಡೆಗಳಲ್ಲಿ ಮಿತಿಯಿಲ್ಲದೆ ವಿಸ್ತರಿಸಿರುವ l ಎಂಬ ರೇಖೆಯನ್ನು ತೆಗೆದುಕೊಳ್ಳೋಣ. (ಚಿತ್ರ 2.1)



(ಚಿತ್ರ 2.1

O ಎಂಬ ಬಿಂದುವೊಂದನ್ನು l ಮೇಲೆ ತೆಗೆದುಕೊಂಡರೆ, ಅದು ಈ ರೇಖೆಯನ್ನು ಎರಡು ಅರ್ಧ ರೇಖೆಗಳನ್ನಾಗಿ ಭಾಗಿಸುತ್ತದೆ; ಇವುಗಳಲ್ಲಿ OX ಎಂಬುದು Oನ ಬಲಗಡೆಗೂ, OX' ಎಂಬುದು ಅದರ ಎಡಗಡೆಗೂ ಇವೆ. O ಬಿಂದುವನ್ನು ಮೂಲ ಬಿಂದುವೆಂದು ಕರೆಯುತ್ತೇವೆ. ಇದು ಸೊನ್ನೆಯನ್ನು ನಿರೂಪಿಸುತ್ತದೆ. O ಬಿಂದುವಿನಿಂದ ಹೊರಟು ಅದರ ಬಲಗಡೆಗೆ $AO = AB = BC = \ldots\ldots = 1$ ಉದ್ದಳತೆಯ ಮಾನವಿರುವಂತೆಯೂ, ಹೀಗೆಯೇ ಅದರ ಎಡಗಡೆಗೆ $OA' = A'B' = B'C' \ldots = 1$ ಉದ್ದಳತೆಯ ಮಾನವಿರುವಂತೆಯೂ ರೇಖಾಖಂಡಗಳನ್ನು ಗುರುತಿಸುತ್ತೇವೆ. ಆಗ A, B, C, D . . . . ಎಂಬ ಬಿಂದುಗಳು ಧನ ಪೂರ್ಣಾಂಕಗಳಾದ $1, 2, 3, 4,$ . . . . ಗಳನ್ನೂ, $A,'B,'C,'D',$ . . . . ಎಂಬ ಬಿಂದುಗಳು ಋಣ ಪೂರ್ಣಾಂಕಗಳಾದ $-1, -2 - 3 - 4$ . . . ಗಳನ್ನೂ ಸೂಚಿಸುತ್ತವೆ.

l ಎಂಬ ಈ ರೇಖೆಯನ್ನು ಸಂಖ್ಯಾರೇಖೆ ಎಂದು ಕರೆಯುತ್ತೇವೆ.

To represent a fraction x on this line we proceed as follows :

Let $x = \dfrac{p}{q}$ where $p, q \in I$ of which q may be considered positive




Fig. 2.2

We mark $OA = p$. The point A is to the right or to the left of O according as p is positive or negative, *i.e.*, as x is positive or negative. Now divide OA into q equal parts* at $A_1, A_2, \ldots A_{q-1}$. (Fig. 2·2)

Then A_1 represents $\dfrac{p}{q}$

Representation of $\sqrt{2}$ on the number line.




Fig. 2.3


Erect $A_1C \perp OM$ and take $A_1C = OA_1 = 1$ unit of length.

Then $OC^2 = OA_1^2 + A_1C^2 = 1^2 + 1^2 = 2$

*The method of construction is due to Euclid and will be found in books on elementary geometry.

ಒಂದು ಭಿನ್ನರಾಶಿಯನ್ನು ಈ ರೇಖೆಯಮೇಲೆ ನಿರೂಪಿಸುವ ಕ್ರಮ ಹೀಗಿದೆ:

ದತ್ತಭಿನ್ನರಾಶಿಯು $x = \frac{p}{q}$, $p, q \in I$ ಆಗಿರಲಿ. ಇವುಗಳಲ್ಲಿ qವನ್ನು ಧನವೆಂದು ಪರಿಗಣಿಸಬಹುದು.




ಚಿತ್ರ 2.2

$OA = p$ ಇರುವಂತೆ, A ಬಿಂದುವನ್ನು, P ಧನ ಸಂಖ್ಯೆಯಾದರೆ Oನ ಬಲಗಡೆಗೂ p ಋಣ ಸಂಖ್ಯೆಯಾದರೆ ಅದರ ಎಡಗಡೆಗೂ ಗುರುತಿಸುತ್ತೇವೆ. ಎಂದರೆ, xಧನ ಸಂಖ್ಯೆಯಾದರೆ Aಯು Oನ ಬಲಗಡೆಗೂ ಅದು ಋಣ ಸಂಖ್ಯೆಯಾದರೆ ಅದರ ಎಡಗಡೆಗೂ ಇರುತ್ತದೆ.

ಈಗ OAಯನ್ನು q ಸಮಭಾಗಗಳಾಗಿ A_1, $A_2 \cdot \cdot \cdot \cdot \cdot, A_{q-1}$ ಗಳಲ್ಲಿ ಛೇದಿಸಿರಿ * ಆಗ A_1 ಬಿಂದು ವು p/qನ್ನು ಸೂಚಿಸುತ್ತದೆ. (ಚಿತ್ರ 2.2)

$\sqrt{2}$ನ್ನು ಸಂಖ್ಯಾರೇಖೆಯ ಮೇಲೆ ನಿರೂಪಿಸುವಿಕೆ.



ಚಿತ್ರ 2.3

A_1C ಯನ್ನು OXಗೆ ಲಂಬವಾಗೆಳೆದು, $A_1C = OA_1 = 1$ ಉದ್ದಳತೆಯ ಮಾನವಾಗಿರುವಂತೆ ಮಾಡಿದರೆ,

$$OC^2 = OA_1^2 + A_1C^2 = 1^2 + 1^2 = 2.$$

* ಈ ಛೇದನ ವಿಧಾನವನ್ನು ಯೂಕ್ಲಿಡನು ಕೊಟ್ಟಿರುತ್ತಾನೆ. ಸರಳ ರೇಖಾಗಣಿತದ ಪುಸ್ತಕಗಳಲ್ಲಿ ಈ ವಿಧಾನವನ್ನು ಕಾಣಬಹುದು.

$\therefore$ OC is of length $\sqrt{2}$ units. If we now step off the segment $OD=OC$, to the right of O, D naturally represents $\sqrt{2}$ on l.

Thus we find that certain points on the number line represent rational numbers, and certain points represent irrational numbers. Now if we mark any point K on l, does it always represent a number which is rational or irrational? The answer to this question was given by the German Mathematician Richard Dedekind (1872) and constitutes what is known as Dedekind's Theorem of continuity. It states that any point chosen arbitrarily on the number line l always represents a number which is either rational or irrational.

This amounts to saying that all real numbers can be represented by means of points on the number line l, and conversely any point taken at random on l represents a real number.

2.8 Arithmetical operations in the set of Real Numbers

(1) *Closure*

If a and b are any two real numbers, then their sum $a+b$ and their product $a.b$ are also real numbers.

e.g. $4+7=11$,

$8\frac{1}{2}+12\frac{1}{4}=20\frac{3}{4}$

$(5+2\sqrt{2})+(4+3\sqrt{7})=9+2\sqrt{2}+3\sqrt{7}$

which are all real numbers.

Also $4\times 7=28\in R$.

$$8\tfrac{1}{2}\times 12\tfrac{1}{4}=\frac{17}{2}\times\frac{49}{4}=\frac{833}{8}\in R$$

$\sqrt{2}\times\sqrt{7}=\sqrt{14}\in R$.

$$(5+\sqrt{2})\times(4+2\sqrt{2})=20+10\sqrt{2}+4\sqrt{2}+4$$
$$=(24+14\sqrt{2})\in R.$$

$\therefore$ OCಯ ಉದ್ದ $\sqrt{2}$ ಮಾನಗಳಾಗುತ್ತವೆ.

ಈಗ O ನಿಂದ ಬಲಕ್ಕೆ lನ ಮೇಲೆ $OD=OC$ ಇರುವಂತೆ ರೇಖಾಖಂಡವನ್ನು ಗುರುತಿಸಿದರೆ, D ಬಿಂದುವು $\sqrt{2}$ ನ್ನು ಸಹಜವಾಗಿ ಸೂಚಿಸುತ್ತದೆ.

ಹೀಗೆ ಸಂಖ್ಯಾರೇಖೆಯ ಮೇಲಿನ ಕೆಲವು ಬಿಂದುಗಳು ಭಾಗಲಬ್ಧ ಸಂಖ್ಯೆಗಳನ್ನೂ, ಮತ್ತೆ ಕೆಲವು ಬಿಂದುಗಳು ಅಭಾಗಲಬ್ಧ ಸಂಖ್ಯೆಗಳನ್ನೂ ಸೂಚಿಸುತ್ತವೆಯೆಂದು ತಿಳಿದು ಬರುತ್ತದೆ. ಈಗ l ಮೇಲೆ K ಎಂಬ ಯಾವುದಾದರೊಂದು ಬಿಂದುವನ್ನು ಗುರುತಿಸಿದರೆ, ಅದು ಯಾವಾಗಲೂ ಒಂದು ಭಾಗಲಬ್ಧ ಸಂಖ್ಯೆಯನ್ನೋ, ಅಭಾಗಲಬ್ಧ ಸಂಖ್ಯೆಯನ್ನೋ ಸೂಚಿಸುತ್ತದೆಯೋ? ಈ ಪ್ರಶ್ನೆಗೆ ರಿಚರ್ಡ್ ಡೆಡೆಕಿಂಡ್ (1872) ಎಂಬ ಜರ್ಮನ್‌ಗಣಿತ ಶಾಸ್ತ್ರಜ್ಞನು ಉತ್ತರ ಕೊಟ್ಟಿರುತ್ತಾನೆ; ಇದು "ಡೆಡೆಕಿಂಡನ ಅವಿಚ್ಛಿನ್ನತೆಯ ಪ್ರಮೇಯ" ವೆನಿಸಿಕೊಂಡಿದೆ.

"lಎಂಬ ಸಂಖ್ಯಾರೇಖೆಯ ಮೇಲೆ ಯಾವುದೇ ಬಿಂದುವಾಗಲಿ, ಅದು ಎಲ್ಲಾ ಸಂದರ್ಭಗಳಲ್ಲೂ ಒಂದು ಭಾಗಲಬ್ಧ ಸಂಖ್ಯೆಯನ್ನೋ ಅಥವಾ ಒಂದು ಅಭಾಗಲಬ್ಧ ಸಂಖ್ಯೆಯನ್ನೋ ಸೂಚಿಸುತ್ತದೆ" ಎಂದು ಈ ಪ್ರಮೇಯವು ಹೇಳುತ್ತದೆ.

ಎಂದರೆ, ಎಲ್ಲಾ ವಾಸ್ತವಸಂಖ್ಯೆಗಳನ್ನೂ ಸಂಖ್ಯಾರೇಖೆಯ ಮೇಲೆ, ನಿರೂಪಿಸಬಹುದು. ಹಾಗೂ ವಿಲೋಮವಾಗಿ, ಈ ರೇಖೆಯ ಮೇಲೆ ತೆಗೆದುಕೊಂಡ ಯಾವ ಒಂದು ಬಿಂದುವೇ ಆಗಲಿ ಒಂದು ವಾಸ್ತವಸಂಖ್ಯೆಯನ್ನು ಸೂಚಿಸುತ್ತದೆ, ಎಂದು ಹೇಳಿದಂತಾಯಿತು.

2. ವಾಸ್ತವ ಸಂಖ್ಯೆಗಳ ಗಣದಲ್ಲಿನ ಅಂಕಗಣಿತದ ಪರಿಕರ್ಮಗಳು

1) ಆವೃತಿ: a ಮತ್ತು bಗಳು ವಾಸ್ತವ ಸಂಖ್ಯೆಗಳಾದರೆ, ಅವುಗಳ ಮೊತ್ತವಾದ $a+b$ ಮತ್ತು ಗುಣಲಬ್ಧವಾದ abಗಳೂ ಸಹ ವಾಸ್ತವ ಸಂಖ್ಯೆಗಳೇ.

ಉದಾ: $4+7=11$

$8\frac{1}{2}+12\frac{1}{4}=20\frac{3}{4}$

$(5+2\sqrt{2})+(4+3\sqrt{7})=9+2\sqrt{2}+3\sqrt{7}$

ಇವೆಲ್ಲಾ ವಾಸ್ತವ ಸಂಖ್ಯೆಗಳೇ.

ಮತ್ತು $4\times 7=28 \in \mathrm{R}$

$$8\tfrac{1}{2}\times 12\tfrac{1}{4}=\frac{17}{2}\times\frac{49}{4}=\frac{833}{8} \in \mathrm{R}$$

$$\sqrt{2}\times\sqrt{7}=\sqrt{14} \in \mathrm{R}$$

$$(5+\sqrt{2})(4+2\sqrt{2})=20+10\sqrt{2}+4\sqrt{2}+4=(24+14\sqrt{2}) \in \mathrm{R}$$

This property is expressed by saying that "*The Set R is closed under addition and multiplication.*"

(2) *Associative Laws*

We notice that if $a, b, c \in R$,

then $(a+b)+c=a+(b+c)$

and $(a \times b) \times c = a \times (b \times c)$

These are respectively the Associative laws of Addition and Multiplication.

(3) *The Commutative Laws*

If $a, b \in R$, then

(1) $a+b=b+a$ and (2) $a \times b = b \times a$

These are respectively the commutative laws of Addition and of Multiplication.

(4) *The identity*

If $a \in R$, then the number 0 is such that $a+0=a=0+a$, and the number 1 is such that $(a \times 1 = a = 1 \times a)$

For this reason, 0 is called the additive identity and 1 the multiplicative identity, in the set R of all real numbers.

(5) *The inverse*

Given a real number a, there exists the real number $-a$ such that

$$a+(-a)=o=(-a)+a$$

Here we call $(-a)$ as the additive inverse of a.

Notice that $+a$ is the additive inverse of $-a$.

"R ಎಂಬ ಗಣವು ಸಂಕಲನ ಮತ್ತು ಗುಣಾಕಾರಗಳಲ್ಲಿ ಆವೃತವಾಗಿದೆ" ಎಂದು ಈ ಒಂದು ಗುಣವನ್ನು ತಿಳಿಸುತ್ತೇವೆ.

(2) ಸಹವರ್ತನೀಯ ನಿಯಮ:--$a, b, c \in R$ ಆದರೆ,

$(a+b)+c=a+(b+c)$

$(a\times b)\times c=a\times(b\times c)$ ಎಂಬುದನ್ನು ಗಮನಿಸಬಹುದು.

ಇವುಗಳು ಸಂಕಲನ ಮತ್ತು ಗುಣಾಕಾರಗಳ ಸಹವರ್ತನೀಯ ನಿಯಮಗಳು.

(3) ಪರಿವರ್ತನೀಯ ನಿಯಮಗಳು

$a, b \in R$ ಆದರೆ,

(1) $a+b=b+a$ ಮತ್ತು (2) $a\times b=b\times a$

ಇವುಗಳೇ ಸಂಕಲನ ಮತ್ತು ಗುಣಾಕಾರಗಳ ಪರಿವರ್ತನೀಯ ನಿಯಮಗಳು.

(4) ಏಕ: $a \in R$ ಆದರೆ, 0 ಎಂಬ ಸಂಖ್ಯೆಯು $a+0=0=0+a$ ಎಂಬ ಸಂಬಂಧಗಳನ್ನೂ, 1 ಎಂಬ ಸಂಖ್ಯೆಯು $a\times 1=a=1\times a$ ಎಂಬ ಸಂಬಂಧಗಳನ್ನೂ ಹೊಂದಿರುತ್ತವೆ. ಆದ ಕಾರಣ ವಾಸ್ತವ ಸಂಖ್ಯೆಗಳ R ಗಣದಲ್ಲಿ 0ಯನ್ನು ಸಂಕಲನದ ಏಕವೆಂದೂ, 1ನ್ನು ಗುಣಾಕಾರದ ಏಕವೆಂದೂ ಕರೆಯುತ್ತೇವೆ.

(5) ಅನುಲೋಮ a ಎಂಬುದೊಂದು ವಾಸ್ತವ ಸಂಖ್ಯೆಯಾದರೆ ಇದಕ್ಕನುಗುಣವಾಗಿ

$(-a)$ ಎಂಬ ಸಂಖ್ಯೆಯೊಂದು R ಗಣದಲ್ಲಿರುತ್ತದೆ.

ಇದು $a+(-a)=0=(-a)+a$ ಆಗುವಂತಿರುತ್ತದೆ.

ಈ ಕಾರಣದಿಂದ $(-a)$ಯನ್ನು aಯ ಸಂಕಲನದ ಅನುಲೋಮವೆನ್ನುತ್ತೇವೆ.

$(-a)$ಯ ಸಂಕಲನದ ಅನುಲೋಮವು $+a$ ಎಂಬುದನ್ನು ಗಮನಿಸಿ.

Again let $a \in R$. $a \neq 0$. Then $\frac{1}{a}$ also $\in R$ and is such that

$$a \times \frac{1}{a} = 1 = \frac{1}{a} \times a$$

On account of this property, $\frac{1}{a}$ is said to be the multiplicative inverse of a.

Further, since $\frac{1}{a} = a$, it follows that a is the multiplicative inverse of $\frac{1}{a}$

(6) *The Distributive laws*

For all $a, b, c \in R$, the following relations are satisfied

$$a \times (b+c) = (a \times b) + (a \times c)$$

$$(a+b) \times c = (a \times c) + (b \times c)$$

These are called the distributive laws of multiplication with reference to addition.

Extension :—

$$(a+b) \times (c+d) = a \times (c+d) + b \times (c+d)$$

$$= ac + ad + bc + bd.$$

Similarly $(a+b+c) \times (d+e+f) =$ the sum of all products of terms one from the first bracket, and one from the second.

ಮತ್ತೆ $a \in R$, $a \neq 0$ ಆದರೆ, $\frac{1}{a}$ ಎಂಬ ಸಂಖ್ಯೆಯೊಂದು R ನಲ್ಲಿರುತ್ತದೆ. ಇದು

$$a \times \frac{1}{a} = 1 = \frac{1}{a} \times a$$ ಆಗುವಂತಿರುತ್ತದೆ.

ಈ ಗುಣದಿಂದ $\frac{1}{a}$ ಯನ್ನು a ಯ ಗುಣಾಕಾರದ ಅನುಲೋಮವೆನ್ನುತ್ತೇವೆ.

ಮುಂದೆ, $\frac{1}{\left(\frac{1}{a}\right)} = a$ ಆದುದರಿಂದ, $\frac{1}{a}$ ಯ ಗುಣಾಕಾರದ ಅನುಲೋಮವು a ಆಗುತ್ತದೆ.

(6) ವಿಭಾಜಕ ನಿಯಮಗಳು. Rಗೆ ಸೇರಿರುವ ಎಲ್ಲಾ a, b, c ಗಳೂ ಮುಂದೆ ಕಾಣಿಸಿರುವ ಸಂಬಂಧಗಳಲ್ಲಿ ನಿಲ್ಲುತ್ತವೆ.

$$a \times (b+c) = (a \times b) + (a \times c)$$

$$(a+b) \times c = (a \times c) + (b \times c)$$

ಇವನ್ನು ಸಂಕಲನಕ್ಕನುಗುಣವಾದ ಗುಣಾಕಾರದ ವಿಭಾಜಕ ನಿಯಮಗಳೆಂದು ಹೇಳುವೆವು.

ವಿಸ್ತರಣೆ

$(a+b) \times (c+d) = a \times (c+d) + b \times (c+d) = ac + ad + bc + bd$ ಹೀಗೆಯೇ, $(a+b+c) \times (d+e+f) =$ ಮೊದಲನೆಯ ಆವರಣದಿಂದ ಒಂದು ಪದವನ್ನೂ ಎರಡನೆಯದರಿಂದ ಒಂದು ಪದವನ್ನೂ ಗುಣಿಸಿ ಬರುವಂಥ ಲಬ್ಧಗಳೆಲ್ಲವುಗಳ ಮೊತ್ತ.

The basic laws satisfied by addition and multiplication in the set R of real numbers, may be summarised sa follows :

For all $a, b, c \in R$

	Law	*Addition*	*Multiplication*
1	Closure	$a+b \in R$	$a.b \in R$
2	Commutative law	$a+b=b+a$	$a.b=b.a$
3	Associative law	$(a+b)+c=a+(b+c)$	$(a.b).\ c=a.(b.c)$
4	Identity	0 is such that for all $a \in R$, $a+0=0+a=a$	1 is such that for all $a \in R$, $1.a=a.1=a$
5	Inverse	$a+(-a)=0=(-a)+a$	If $a \neq 0$, $a \times \frac{1}{a} = 1 = \frac{a}{1} \times a$
6	Distributive laws	$a \times (b+c)=(b+c) \times a=(a.b)+(a.c)$	

2.9 Order Relation in the Set of Real Numbers.—Given two real numbers a and b, the equation $a+x=b$ can always be solved, with $x \in R$.

Here, if (1) x is a positive number, we say that a is ess than b, and write $a<b$,

if (2) $x=0$, $a=b$,

and if (3) x is a negative number, we say that a is greater than b, and write $a>b$.

This relation is called an order relation.

R ಎಂಬ ವಾಸವ ಸಂಖ್ಯೆಗಳ ಗಣದಲ್ಲಿ ಸಂಕಲನ ಮತ್ತು ಗುಣಾಕಾರಗಳು ಪರಿಪಾಲಿಸುವ ಮೂಲ ನಿಯಮಗಳನ್ನು ಹೀಗೆ ಸಂಗ್ರಹಿಸಬಹುದು.

Rಗೆ ಸೇರಿರುವ ಎಲಾ a, b, c ಗಳಿಗೂ,

ನಿಯಮ	ಸಂಕಲನ	ಗುಣಾಕಾರ
1 ಆವೃತಿ	$a+b \in R$	$a \cdot b \in R$
2 ಪರಿವರ್ತನೀಯ	$a+b=b+a$	$a \cdot b=b \cdot a$
3 ಸಹ ವರ್ತನೀಯ	$(a+b)+c=a+(b+c)$	$(a \cdot b) \cdot c=a \cdot (b \cdot c)$
4 ಏಕ	$a+0=0+a=a$ ಎಂದಾಗುವಂತೆ R ನಲ್ಲಿ 0ಎಂಬ ಸಂಖ್ಯೆ ಇರುತ್ತದೆ.	$1 \cdot a=a \cdot 1=a$ ಎಂದಾಗುವಂತೆ R ನಲ್ಲಿ 1 ಎಂಬ ಸಂಖ್ಯೆ ಇರುತ್ತದೆ.
5 ಅನುಲೋಮ	$a+(-a)=0=(-a)+a$	$a \times \frac{1}{a}=1=\frac{1}{a} \times a$, $a \neq 0$
6 ವಿಭಾಜಕ ನಿಯಮಗಳು	$a \times (b+c)=(a \times b)+(a \times c)=(b+c) \times a$	

2.9 ವಾಸ್ತವ ಸಂಖ್ಯೆಗಳ ಗಣದಲ್ಲಿನ ಅನುಕ್ರಮ ಸಂಬಂಧ.

a, bಗಳೆಂಬ ಎರಡು ವಾಸ್ತವ ಸಂಖ್ಯೆಗಳನ್ನು ಕೊಟ್ಟರೆ $a+x=b$ ಎಂಬ ಸಮೀಕರಣವನ್ನು $x \in R$ ಯಾವಾಗಲೂ ಇರುವಂತೆ ಬಿಡಿಸಬಹುದು.

ಇಲ್ಲಿ (1) x ಧನಸಂಖ್ಯೆಯಾದರೆ, aಯು bಗಿಂತ ಚಿಕ್ಕದು, ಎಂದು ಹೇಳುತ್ತೇವೆ. ಮತ್ತು $a<b$ ಎಂದು ಬರೆಯುತ್ತೇವೆ.

(2) $x=0$ ಆದರೆ, $a=b$ ಆಗುತ್ತದೆ.

(3) x ಋಣ ಸಂಖ್ಯೆಯಾದರೆ, a ಯು b ಗಿಂತ ದೊಡ್ಡದು ಎಂದು ಹೇಳುತ್ತೇವೆ, ಮತ್ತು $a>b$ ಎಂದು ಬರೆಯುತ್ತೇವೆ. ಈ ಬಗೆಯ ಸಂಬಂಧವನ್ನು ಅನುಕ್ರಮ ಸಂಬಂಧವೆನ್ನುತ್ತೇವೆ.

We notice that if $a>b$, then $b<a$.


Proof :—Since $a>b$, there exists a negative number x such that $a+x=b$.

Adding $-x$ to both sides, we get

$a=b+(-x)$ where $(-x)$ is positive $\therefore$ by definition,

$$b<a.$$

Geometrical Representation :—



Let $a<b$. $\therefore$ there exists a positive number x such that $a+x=b$. Let A represent a on the number line l. Then b is represented on l by the point B, distant x from A to its right ; $\therefore$ if $a<b$, then A lies to the left of B.

Similarly if $a>b$, then A lies to the right of B.

If $a=b$ then A and B coincide. Since the origin O represents the number 0, if x is positive $x>0$, and if x is negative, $x<0$.

Properties of the Order Relation.

The law of trichotomy :—

(1) If $a, b \in R$, then one and only one of the following three relations holds :


$$a<b, \ a=b \text{ or } a>b$$

This property is described as the law of Trichotomy.

$a>b$ ಆದರೆ, $b<a$ ಎಂಬುದನ್ನು ಗಮನಿಸಿ.

ಸಾಧನೆ : $a>b$ ಆದುದರಿಂದ, $a+x=b$ ಆಗುವಂತೆ, x ಎಂಬ ಒಂದು ಋಣ ಸಂಖ್ಯೆ ಇರುತ್ತದೆ. ಮೇಲಿನ ಸಮೀಕರಣದ ಉಭಯ ಪಾರ್ಶ್ವಗಳಿಗೂ $(-x)$ನ್ನು ಕೂಡಿದರೆ, $a=b+(-x)$ ಎಂದಾಗುತ್ತದೆ. ಇಲ್ಲಿ $(-x)$ ಎಂಬುದು ಧನಸಂಖ್ಯೆ. $\therefore$ ವ್ಯಾಖ್ಯೆಗೆ ಅನುಗುಣವಾಗಿ, $b<a$,

ಜ್ಯಾಮಿತೀಯ ನಿರೂಪಣೆ:—



$a<b$ ಎಂದಿರಲಿ, $\therefore$ $a+x=b$ ಆಗುವಂತೆ x ಎಂಬ ಧನಸಂಖ್ಯೆಯೊಂದಿರುತ್ತದೆ ಸಂಖ್ಯಾ ರೇಖೆಯಾದ l ಮೇಲೆ A ಬಿಂದುವು a ಯನ್ನು ನಿರೂಪಿಸಲಿ. ಈಗ, Aಯ ಬಲಗಡೆಗೆ, ಅದರಿಂದ x ದೂರದಲ್ಲಿರುವ B ಎಂಬ ಬಿಂದುವು b ಯನ್ನು l ಮೇಲೆ ನಿರೂಪಿಸುತ್ತದೆ. $\therefore$ $a<b$ ಆದರೆ, Aಯು Bಯ ಎಡಭಾಗದಲ್ಲಿರುತ್ತದೆ. ಹಾಗೆಯೇ $a>b$ ಆದರೆ, Aಯು Bಯ ಬಲಭಾಗದಲ್ಲಿರುತ್ತದೆ. $a=b$ ಆದರೆ, A ಮತ್ತು Bಗಳು ಸಂಗಮಿಸುತ್ತವೆ. O ಎಂಬ ಮೂಲ ಬಿಂದುವು ಸೊನ್ನೆಯನ್ನು ನಿರೂಪಿಸುವುದರಿಂದ, x ಧನಸಂಖ್ಯೆಯಾದರೆ $x>0$ ಆಗಿಯೂ, x ಋಣ ಸಂಖ್ಯೆಯಾದರೆ $x<0$ ಆಗಿಯೂ ಇರುತ್ತವೆ.

ಅನುಕ್ರಮ ಸಂಬಂಧದ ಗುಣಗಳು

(1) ತ್ರಿಚ್ಛೇದ್ಯ ನಿಯಮ :—$a, b \in R$ ಆದರೆ,

$a<b$, $a=b$, $a>b$ ಎಂಬ ಮೂರು ಸಂಬಂಧಗಳಲ್ಲಿ ಒಂದು ಮತ್ತು ಒಂದು ಮಾತ್ರ ನಿಲ್ಲುತ್ತದೆ.

ಇದನ್ನು ಅನುಕ್ರಮ ಸಂಬಂಧದ ತ್ರಿಚ್ಛೇದ್ಯ ನಿಯಮವೆನ್ನುವರು.

The Transitive Law :—

(2) If $a<b$ and $b<c$. then $a<c$. For, since $a<b$, there exists a positive number y such that $a+y=b$

And since $b<c$, there exists a positive number z such that

$$b+z=c$$

Now $c=b+z=(a+y)+z=a+(y+z)$ where $y+z=$ some positive number $=x$.

$\therefore\ a+x=c$ where x is positive.

$\therefore\ a<c$.

The law of addition :

(3) If $a<b$ and $c\leqslant d$. then $a+c<b+d$

For, $\because\ a<b\ \therefore$ there exists a positive number x such that

$$a+x=b$$

$\therefore\ a-b=-x$ is a negative number.

$\because\ c\leqslant d,\ \therefore$ there exists a number $y\geqslant 0$. such that

$$c+y=d$$

$$\therefore\ c-d=-y\leqslant 0.$$

Now $(a+c)-(b+d)=(a-b)+(c-d)$ where

$$a-b<0 \text{ and } c-d\leqslant 0$$

$$\therefore\ (a+c)-(b+d)<0$$

$$\therefore\ (a+c)<(b+d)$$

(4) *The law of multiplication* :

If $a<b$, then $ka<kb$ if k is positive and $ka>kb$ if k is negative.

For, (1) When $k>0$, and $a<b$ *i.e.* $(a-b)<0$

$$\therefore\ ka-kb=k\,(a-b) \text{ is negative}$$

$$\therefore\ k(a-b)<0\ \therefore\ ka<kb.$$

(2) ವಾಹಕ ನಿಯಮ: $a<b$, $b<c$ ಆದರೆ $a<c$ ಆಗಿರುತ್ತದೆ. ಏಕೆಂದರೆ $a<b$ ಆದುದರಿಂದ, $a+y=b$ ಆಗುವಂತೆ y ಎಂಬ ಒಂದು ಧನ ಸಂಖ್ಯೆ ಇರುತ್ತದೆ; ಹಾಗೆಯೇ

$b<c$ ಆದುದರಿಂದ, $b+z=c$ ಆಗುವಂತೆ, z ಎಂಬ ಒಂದು ಧನಸಂಖ್ಯೆ ಇರುತ್ತದೆ,

ಈಗ $c=b+z=(a+y)+z=a+(y+z)=a+x$

ಇಲ್ಲಿ $x=y+z$ ಒಂದು ಧನಸಂಖ್ಯೆ.

$\therefore a<c$

(3) ಸಂಕಲನ ನಿಯಮ: $a<b$ ಮತ್ತು $c\leqslant d$ ಆದರೆ $a+c<b+d$

ಏಕೆಂದರೆ, $a<b$ ಆದುದರಿಂದ $a+x=b$ ಆಗುವಂತೆ, x ಎಂಬ ಧನಸಂಖ್ಯೆ ಇರುತ್ತದೆ. ಎಂದರೆ $a-b=-x$, ಒಂದು ಋಣ ಸಂಖ್ಯೆಯಾಗಿರುತ್ತದೆ.

$\therefore\ a-b<0$

$c\leqslant d$ ಆದುದರಿಂದ, $c-d\leqslant 0$

$\therefore\ (a+c)-(b+d)=(a-b)+(c-d)<0+0=0.$

$\therefore\ (a+c)-(b+d)<0 \quad \therefore (a+c)<(b+d).$

(4) ಗುಣಾಕಾರ ನಿಯಮ.

$a<b$ ಆದರೆ, $k>0$ ಆದರೆ, $ka<kb$

ಮತ್ತು $k<0$ ಆದರೆ, $ka>kb$.

ಏಕೆಂದರೆ, $a<b \quad \therefore\ (a-b)<0$

ಈಗ $ka-kb=k(a-b)$

(1) ಇಲ್ಲಿ $k>0$ ಆದರೆ, $k(a-b)<0$

ಎಂದರೆ $ka-kb<0 \quad \therefore ka<kb$.

(2) Again when $k<0$,

$ka-kb=k(a-b)$ where both k and $(a-b)$ are negative $\therefore k(a-b)>0$.

$\therefore ka-kb>0$ ie $ka>kb$

(5) *The Reciprocal Law of the Order Relation* :—

If $0<a<b$, then

$\frac{1}{a}>\frac{1}{b}$ Now $a>0$, $b>0 \therefore ab>0 \therefore \frac{1}{ab}>0$ But $a<b$

Multipy both sides by $\frac{1}{ab}$

$$\therefore \frac{a}{ab}<\frac{b}{ab}$$

$\therefore \frac{1}{b}<\frac{1}{a}$ which implies $\frac{1}{a}>\frac{1}{b}$,

e.g. $0<2<5$ Notice that $\frac{1}{2}>\frac{1}{5}$

Examples :—

(1) Evaluate $S=\{x|x\in I, 4x+11\geqslant 31\}$

$4x+11\geqslant 31=20+11$

Adding—11 to both sides

$(4x+11)-11\geqslant(20+11)-11$

$\therefore \quad 4x+(11-11)\geqslant 20+(11-11)$

$\therefore \quad 4x\geqslant 20$

Dividing by 4 $(\neq 0)$, we get,

$$x\geqslant 5$$

$\therefore \quad x=5, 6, 7, 8, \ldots$

$\therefore \quad S=\{5, 6, 7, 8, 9, \ldots\}$

(2) ಆದರೆ, $k<0$ ಆಗಿದ್ದಾಗ, $k(a-b)>0$

ಎಂದರೆ $ka-kb>0 \quad \therefore\ ka>kb$

(5) ಅನುಕ್ರಮ ಸಂಬಂಧದ ಪ್ರತಿಲೋಮ ನಿಯಮ :

$0< a < b$ ಆದರೆ, $\frac{1}{a}>\frac{1}{b}$

ಈಗ $a<b$ ಮತ್ತು $ab > 0 \therefore \frac{1}{ab}>0$

ಎರಡು ಕಡೆಗಳನ್ನೂ $\frac{1}{ab}$ ಯಿಂದ ಗುಣಿಸಿದರೆ

$\frac{1}{ab}\cdot a < \frac{1}{ab}\cdot b$

$\therefore \frac{1}{b} < \frac{1}{a}, \therefore \frac{1}{a} > \frac{1}{b},$

ಉದಾ: $0 < 2 < 5$ ಮತ್ತು $\frac{1}{2} > \frac{1}{5}$

ಉದಾಹರಣೆಗಳು (1)

$S=\{x/x \in I,\ 4x+11 \geqslant 31\}$ನ್ನು ಕಂಡುಹಿಡಿಯಿರಿ.

$4x+11 \geqslant 31 = 20+11$

-11ನ್ನು ಎರಡು ಕಡೆಗಳಿಗೆ ಸೇರಿಸಿದರೆ,

$(4x+11)-11 \quad \geqslant(20+11)-11$

$\therefore 4x+(11-11)\geqslant 20+(11-11)$

$\therefore 4x\geqslant 20$

$4(\neq 0)$ ನಿಂದ ಭಾಗಿಸಿದರೆ

$\therefore x\geqslant 5$

$\therefore \quad x=5,\ 6,\ 7,\ 8,\ldots\ldots$

$\therefore S=\{5,\ 6,\ 7,\ 8\ldots\ldots\}$

(2) Find all integers x such that

$$7x+5<26$$

$$7x+5<26=21+5$$

Adding—5 to both sides

$$\therefore \quad 7x+(5-5)<21+(5-5)$$

$$\therefore \quad 7x<21$$

Dividing by 7 ($\neq 0$), we get

$$x<3$$

$$\therefore \quad x=2,\ 1,\ 0,\ 1-,\ -2,\ -3,\ \ldots\ldots$$

Absolute Value

If $x \in R$, then the absolute value of x, denoted by the symbol $|x|$ is defined as the positive value of x. The symbol is read as the modulus of x, or briefly mod x.

e.g. $|2| = 2$, $|9| = 9$, $|-4| = 4$, $|-7\frac{1}{2}| = 7\frac{1}{2}$.

Exercises.—2.2

I. Find (1) $\{x \mid x \in I,\ 3x+5<17\}$

(2) $\{x \mid x \in I,\ x+13>-4x-2\}$

(3) $\{x \mid x \in I,\ 3x-5 \geqslant 7-x\}$

(4) $\{x \mid x \in I,\ 2x+3 \leqslant -5-2x\}$

(5) $\{x \mid x \in I,\ 14x-17 \geqslant 13-x\}$

II Simplify the following :—

(1) $|3| + |7|$

(2) $3 - |3-4|$

(2)

$7x+5<26$ ಇರುವಂತೆ, ಎಲ್ಲಾ ಪೂರ್ಣಾಂಕಗಳನ್ನು ಕಂಡುಹಿಡಿಯಿರಿ.

$7x+5<26=21+5,$

ಎರಡು ಕಡೆಗಳಿಗೂ -5ನ್ನು ಸೇರಿಸಿದರೆ,

$7x+(5-5)<21+(5-5)$

$\therefore 7x<21.$

$7(\neq 0)$ ರಿಂದ ಭಾಗಿಸಿದರೆ,

$x<3$ ಎಂಬುದು ಸಿಕ್ಕುತ್ತದೆ.

$\therefore \quad x=2,\ 1,\ 0,\ -1,\ -2,\ -3,\ldots\ldots\ldots$

ಧನಾತ್ಮಕ ಮೌಲ್ಯ

$x\in R$ ಆಗಿದ್ದರೆ, ಅದರ ಧನಾಂಶದ ಬೆಲೆಯನ್ನು, xನ ಧನಾತ್ಮಕ ಮೌಲ್ಯವೆಂದು ಹೇಳುತ್ತೇವೆ; ಇದನ್ನು $|x|$ ಎಂಬ ಚಿಹ್ನೆಯಿಂದ ನಿರೂಪಿಸುತ್ತೇವೆ. ಈ ಚಿಹ್ನೆಯನ್ನು x ನ ಮಾಡುಲಸ್ ಅಥವಾ ಸಂಕ್ಷೇಪವಾಗಿ ''ಮಾಡ್ x'' ಎಂದು ಓದುತ್ತೇವೆ.

ಉದಾ: $|2|=2,\quad |0|=0,\quad |-4|=4,$
$|-7\frac{1}{2}|=7\frac{1}{2}$

ಅಭ್ಯಾಸ 2.2

I ಇವುಗಳನ್ನು ಕಂಡುಹಿಡಿಯಿರಿ.

(1) $\{x \mid x\in I,\quad 3x+5<17\}$
(2) $\{x \mid x\in I,\quad x+13>-4x-2\}$
(3) $\{x \mid x\in I,\quad 3x-5\geqslant 7-x\}$
(4) $\{x \mid x\in I,\quad 2x+3\leqslant -5-2x\}$
(5) $\{x \mid x\in I,\quad 14x-17\geqslant 13-x\}$

II ಇವುಗಳನ್ನು ಸುಲಭರೂಪಕ್ಕೆ ತನ್ನಿ :

(1) $|3|+|7|$
(2) $3-|3-4|$

(3) $|-5| \times |13|$

(4) $-(|-12+3|)$

(5) $(|-3|-3) \times 5$

2.10 Complex Numbers.—In the course of solution of quadratic equations, sometimes we come across quantities of the form $\sqrt{(\text{a negative number})}$

e.g. in the case of the equation

$$x^2+1=0$$
$$x^2=-1$$

Taking square roots we get $x=\pm\sqrt{-1}$

Similarly for the equation $x^2+x+1=0$

$$\text{we get } x=\frac{-1\pm\sqrt{-3}}{2}$$
$$=\frac{-1\pm\sqrt{-1}\sqrt{3}}{2}$$

Thus the symbol $\sqrt{-1}$ finds its entry into our calculations.

However there is no real number, whose square is -1. Thus, solution of quadratic equations is not always possible within the set R of real numbers. For this purpose, we need to extend the number system still further.

In order that the equation $x^2+1=0$ may have solution in this extended system, we need to have the symbol $i=\sqrt{-1}$ as a number, and we must use it in all the arithmetical operations, along with other numbers, subject only to the relation $i^2=-1$.

The new number thus postulated is called the imaginary unit, and it will be seen that by combining it along with other numbers, any quadratic equation can be solved

(3) $|-5| \times |-13|$

(4) $-(|-12+3|)$

(5) $(|-3|-3) \times 5$

2.10 ಮಿಶ್ರಸಂಖ್ಯೆಗಳು

ವರ್ಗಸಮೀಕರಣಗಳನ್ನು ಬಿಡಿಸುವಾಗ. ಕೆಲವು ವೇಳೆ $\sqrt{(\text{ಋಣಸಂಖ್ಯೆ})}$ ಈ ತರದ ಪರಿಮಾಣಗಳು ತಲೆದೋರುತ್ತವೆ.

ಉದಾ: $x^2+1=0$ ಎಂಬ ಸಮೀಕರಣದಲ್ಲಿ $x^2=-1$

$\therefore$ ವರ್ಗಮೂಲಗಳನ್ನು ತೆಗೆದುಕೊಂಡರೆ, $x=\pm\sqrt{-1}$ ಎಂದಾಗುತ್ತದೆ.

ಹಾಗೆಯೇ $x^2+x+1=0$ ಎಂಬಲ್ಲಿ,

$$x=\frac{-1\pm\sqrt{-3}}{2}=\frac{-1\pm\sqrt{-1}\sqrt{3}}{2}$$ ಎಂದಾಗುತ್ತದೆ.

ಹೀಗೆ, $\sqrt{-1}$ ಎಂಬ ಚಿಹ್ನೆಯು ಲೆಕ್ಕಾಚಾರಗಳಲ್ಲಿ ಪ್ರವೇಶಿಸುತ್ತದೆ.

ಆದರೆ, -1 ಎಂಬುದನ್ನು ವರ್ಗವಾಗಿ ಇರುವ ಯಾವ ವಾಸ್ತವ ಸಂಖ್ಯೆಯೂ ಇರುವುದಿಲ್ಲ. ಆದುದರಿಂದ, ವಾಸ್ತವ ಸಂಖ್ಯೆಗಳ R ಎಂಬ ಗಣದಲ್ಲೇ ಇದ್ದುಕೊಂಡು ವರ್ಗಸಮೀಕರಣಗಳನ್ನು ಎಲ್ಲಾ ಸಂದರ್ಭಗಳಲ್ಲೂ ಬಿಡಿಸಲಾಗುವುದಿಲ್ಲ. ಈ ಉದ್ದೇಶದಿಂದಲೇ ಸಂಖ್ಯಾವ್ಯೂಹವನ್ನು ಮತ್ತಷ್ಟು ವಿಸ್ತರಿಸಬೇಕಾಗಿ ಬಂದಿದೆ. ಈ ರೀತಿಯಲ್ಲಿ ವಿಸ್ತರಿಸಲ್ಪಟ್ಟ ಹೊಸ ಸಂಖ್ಯಾವ್ಯೂಹದಲ್ಲಿ,

$x^2+1=0$ ಎಂಬ ಸಮೀಕರಣದ ಮೂಲಗಳಿರಬೇಕಾದರೆ, $i=\sqrt{-1}$ ಎಂಬ ಚಿಹ್ನೆಯನ್ನು ಇದರಲ್ಲಿ ಒಂದು ಸಂಖ್ಯೆಯನ್ನಾಗಿ ತೆಗೆದುಕೊಳ್ಳಬೇಕಾಗುವುದು; ಮತ್ತು ಅದನ್ನು ಅಂಕಗಣಿತದ ಎಲ್ಲಾ ಪರಿಕರ್ಮಗಳಲ್ಲೂ, $i^2=-1$ ಎಂಬ ಸಂಬಂಧವನ್ನಿಟ್ಟುಕೊಂಡು, ಇತರ ಸಂಖ್ಯೆಗಳೊಂದಿಗೆ ಉಪಯೋಗಿಸಬೇಕಾಗುತ್ತದೆ.

ಹೀಗೆ ಕಲ್ಪಿಸಿಕೊಂಡ ಹೊಸ ಸಂಖ್ಯೆಯನ್ನು ಊಹ್ಯಾ ಏಕ (ಊಹಾ ಜನಕ ಏಕ) ಎಂದು ಕರೆಯುತ್ತೇವೆ. ಇದನ್ನು ಇತರ ಸಂಖ್ಯೆಗಳೊಂದಿಗೆ ಉಪಯೋಗಿಸಿಕೊಂಡರೆ. ಯಾವ ವರ್ಗ ಸಮೀಕರಣವನ್ನು ಬೇಕಾದರೂ ಬಿಡಿಸಬಹುದೆಂದು ಕಾಣಬಹುದು.

e.g. $x^2+1=0$ has the solutions $x=\pm\ i$; $x^2+x+1=0$ has the solutions

$$x=\frac{-1\pm\sqrt{-3}}{2}=\frac{-1\pm\ \sqrt{3}}{2}$$

The solution of the general quadratic equation will be taken up in a later chapter.

A number of the form $a+ib$, where a and b are real numbers, is called a complex number ; a is called its real part and $i\ b$ its imaginary part. The set of all complex numbers is denoted by C. This set contains every real number for any real number a can be written as $a+i0$ $\therefore R\subset C$

A complex number of the form $0+ib$, with its real part zero, will be called purely imaginary. Thus a purely imaginary number is of the form ib where $b\in R$. The real number 0 is written as a complex number in the form $0+i0$.

Equality and Arithmetical Operations.

(1) Two complex numbers $a+ib$ and $c+id$ are said to be *equal* and written as

$a+ib=c+id$ if $a=c$ and $b=d$

(2) *Addition* :—Addition of complex numbers $a+ib$, $c+id$ is defined by the formula

$$(a+ib)+(c+id)=(a+c)+i(b+d)$$

which is again a complex number.

$\therefore$ C is *closed* under addition.

Further, since

$$a+c=c+a \text{ and } b+d=d+b$$

it follows that

$$(a+ib)+(c+id)=(c+id)+(a+ib)$$

$\therefore$ Addition of complex numbers is *Commutative.*

ಉದಾ (1) $x^2+1=0$ ಸಮೀಕರಣದ ಮೂಲಗಳು $\pm i$.

(2) $x^2+x+1=0$ ಸಮೀಕರಣದ ಮೂಲಗಳು

$$x=\frac{-1\pm i\sqrt{3}}{2}$$ ಆಗಿವೆ.

ಸಾಮಾನ್ಯ ವರ್ಗ ಸಮೀಕರಣವನ್ನು ಬಿಡಿಸುವ ಕಾರ್ಯವನ್ನು ಮುಂದಿನ ಅಧ್ಯಾಯ ವೊಂದರಲ್ಲಿ ವಿಚಾರ ಮಾಡಲಾಗುವುದು.

a ಮತ್ತು b ಗಳು ವಾಸ್ತವ ಸಂಖ್ಯೆಗಳಾಗಿದ್ದಾಗ, $a+ib$ ರೂಪದಲ್ಲಿರುವ ಸಂಖ್ಯೆಗಳನ್ನು ಮಿಶ್ರ ಸಂಖ್ಯೆಗಳೆಂದು ಹೇಳುತ್ತೇವೆ, aಯನ್ನು ಅದರ ವಾಸ್ತವ ಭಾಗ ವೆಂದೂ, ibಯನ್ನೂ ಅದರ ಊಹ್ಯಭಾಗವೆಂದೂ ಕರೆಯುತ್ತೇವೆ. ಎಲ್ಲಾ ಮಿಶ್ರ ಸಂಖ್ಯೆಗಳಿಂದ ರಚಿತವಾದ ಗಣವನ್ನು C ಎಂದು ನಿರೂಪಿಸುತ್ತೇವೆ. ಪ್ರತಿಯೊಂದು ವಾಸ್ತವ ಸಂಖ್ಯೆಯೂ ಈ ಗಣಕ್ಕೆ ಸೇರಿರುತ್ತದೆ. ಏಕೆಂದರೆ, a ಎಂಬ ವಾಸ್ತವ ಸಂಖ್ಯೆಯನ್ನು $a+i0$ ಎಂದು ಬರೆಯಬಹುದಲ್ಲವೇ ?

$\therefore R\subset C$

ತನ್ನ ವಾಸ್ತವ ಭಾಗವು ಶೂನ್ಯವಾಗಿರುವ, $0+ib$ ರೂಪದಲ್ಲಿರುವ ಮಿಶ್ರ ಸಂಖ್ಯೆಯನ್ನು ಶುದ್ಧ ಊಹ್ಯ ಸಂಖ್ಯೆಯೆಂದು ಕರೆಯುವೆವು. ಹೀಗೆ, ಶುದ್ಧ ಊಹ್ಯ ಸಂಖ್ಯೆಗಳೆಲ್ಲಾ ib, [ಇಲ್ಲಿ $(b\in R)$] ರೂಪದಲ್ಲಿರುತ್ತವೆ. 0 ಎಂಬ ವಾಸ್ತವ ಸಂಖ್ಯೆ ಯನ್ನು $0+i0$ ಎಂದು ಮಿಶ್ರ ರೂಪದಲ್ಲಿಡಬಹುದು.

ಸಮತ್ವ ಮತ್ತು ಅಂಕಗಣಿತದ ಪರಿಕರ್ಮಗಳು

(1) $a=c$ ಮತ್ತು $b=d$ ಆಗಿದ್ದರೆ, $a+ib$ ಮತ್ತು $c+id$ ಎಂಬ ಮಿಶ್ರ ಸಂಖ್ಯೆಗಳು ಪರಸ್ಪರ ಸಮವಾಗಿವೆಯೆಂದು ಹೇಳುತ್ತೇವೆ, ಮತ್ತು $a+ib=c+id$ ಎಂದು ಬರೆಯುತ್ತೇವೆ.

(2) ಸಂಕಲನ : ಮಿಶ್ರ ಸಂಖ್ಯೆಗಳ ಸಂಕಲನವನ್ನು $(a+id)+(c+id)=(a+c)+i(b+d)$ ಎಂಬ ಸೂತ್ರದ ಮೂಲಕ ನಿಷ್ಕರ್ಷಿಸುತ್ತೇವೆ. ಇಲ್ಲಿ $(a+c)+i(b+d)$ ಎಂಬುದೂ ಒಂದು ಮಿಶ್ರ ಸಂಖ್ಯೆಯೇ.

$\therefore$ C ಎಂಬ ಗಣವು ಸಂಕಲನದ ಬಗ್ಗೆ ಆವೃತವಾಗಿದೆ.

ಮತ್ತೆ, $a+c=c+a$, $b+d=d+b$ ಆಗಿರುವುದರಿಂದ,

$(a+ib)+(c+id)=(c+id)+(a+ib)$ ಎಂದಾಗುತ್ತದೆ.

$\therefore$ ಮಿಶ್ರ ಸಂಖ್ಯೆಗಳ ಸಂಕಲನವು ಪರಿವರ್ತನೀಯವಾಗಿದೆ.

It is easy to verify *the associative law.*

$$[(a+ib) + (c+id)] + (e+if) = (a+ib) + [(c+id) + (e+if)]$$

The additive identity $0=0+i0$ is the additive identity in the set C of all complex numbers.

For $(a+ib) + (o+io) = (a+o) + i(b+o) = a+ib$.

Again by the commutative law

$(o+io)+(a+ib)=a+ib$

(2) *The additive inverse* :— The complex number

$a+ib$ has $(-a)+i(-b)$

$=-a-ib$ for its additive inverse. for

$(a+ib)+[(-a)+i(-b)]=(a-a)+i(b-b)=o+io=$

$\therefore a+ib$ and $(-a)+i(-b)$ are additive inverses of each other.

(2) *Subtraction* is defined by

$(a+ib)-(c+id)=(a+ib)+[(-c)+i(-d)$

as the inverse of addition.

(3) *Multiplication* : $a+ib$ and $c+id$ are multiplied like ordinary binomial expressions as follows :

$(a+ib) \times (c+id)=ac+aid+ibc+ibid$

Using the commutative and associative laws of addition and multiplication we write this as

ಮುಂದೆ ಸೂಚಿಸಿರುವ ಸಹವರ್ತನೀಯ ನಿಯಮವನ್ನು ಸುಲಭವಾಗಿ ಸರಿ ನೋಡಬಹುದು :

$$[(a+ib) + (c+id)] + (e+if) = (a+ib) + [(c+id) + (e+if)]$$

ಸಂಕಲನದ ಏಕ :— $0=0+i0$ ಎಂಬುದು ಮಿಶ್ರ ಸಂಖ್ಯೆಗಳ C ಎಂಬ ಗಣದಲ್ಲಿ ಸಂಕಲನದ ಏಕವಾಗಿ ವ್ಯವಹರಿಸುತ್ತದೆ.

ಏಕೆಂದರೆ,

$$(a+ib) + (0+i0) = (a+0) + i\ (b+0) = a+ib$$

ಪುನಃ, ಪರಿವರ್ತನೀಯ ನಿಯಮದಿಂದ,

$(0+i0) + (a+ib) = a+ib$, ಎಂದಾಗುತ್ತದೆ.

(1) ಸಂಕಲನದ ಅನುಲೋಮ :—$(a+ib)$ ಎಂಬ ಮಿಶ್ರ ಸಂಖ್ಯೆಗೆ $(-a)+i\ (-b)$ ಎಂಬುದು ಸಂಕಲನದ ಅನುಲೋಮವಾಗಿ ವ್ಯವಹರಿಸುತ್ತದೆ.

ಏಕೆಂದರೆ,

$$\begin{aligned}(a+ib) + [(-a) + i\ (-b)] &= (a-a) + i\ (b-b) \\ &= 0+i0 = 0.\end{aligned}$$

$\therefore$ $(a+ib)$ ಮತ್ತು $(-a) + i\ (-b)$ ಗಳು ಪರಸ್ಪರ ಸಂಕಲನದ ಅನುಲೋಮಗಳಾಗಿರುತ್ತವೆ.

(2) ವ್ಯವಕಲನ : $(a+ib) - (c+id) = (a+ib) + [(-c) + i\ (-d)]$ ಎಂಬುದಾಗಿ, ಸಂಕಲನದ ಅನುಲೋಮದಂತೆ ಪರಿಗಣಿಸುತ್ತೇವೆ.

(3) ಗುಣಾಕಾರ : $(a+ib)$ ಮತ್ತು $(c+id)$ ಗಳನ್ನು ಸಾಮಾನ್ಯ ದ್ವಿಪದಗಳಂತೆಯೇ ಮುಂದೆ ಸೂಚಿಸಿರುವಂತೆ ಗುಣಿಸುತ್ತೇವೆ.

$(a+ib) \times (c+id) = ac+aid+ibc+ibid$ ಈಗ ಸಂಕಲನ ಮತ್ತು ಗುಣಾಕಾರಗಳ ಸಹವರ್ತನೀಯ ಮತ್ತು ಪರಿವರ್ತನೀಯ ನಿಯಮಗಳನ್ನನುಸರಿಸಿ,

$$(a+ib)\times(c+id)=ac+iad+ibc+i^2bd$$

But $i^2=-1$ $\therefore$ the product $=(ac-bd)+i(ad+bc)$

$$\therefore\ (a+ib)\times(c+id)=(ac-bd)+i(ad+bc)$$

which is again a complex number

$\therefore$ C is closed under multiplication.

Conjugate complex numbers

If a and b are real, $a+ib$ and $a-ib$ are said to be conjugate complex numbers. We notice the following interesting results relating to such pairs of complex numbers.

(1) The sum of two conjugate complex numbers is a real number.

For $(a+ib)+(a-ib)=a+(ib-ib)+a=2a\in R$

(2) The difference between two conjugate complex numbers is a purely imaginary number.

For $(a+ib)-(a-ib)=(ib+a)-(a-ib)$

$=ib+(a-a)+ib$

$=2ib$ which is purely imaginary.

(3) The Product of two conjugate complex numbers is a real number.

For $(a+ib)\ (a-ib)=a^2-(ib)^2=a^2+b^2$

which is a real number.

$$(a+ib) \times (c+id) = ac+iad+ibc+i^2bd$$

ಎಂದು ಬರೆಯುತ್ತೇವೆ. ಆದರೆ $i^2 = -1$

$$\therefore \quad \text{ಲಬ್ಧ} = (ac-bd) + i\,(ad+bc)$$

ಎಂದರೆ, $(a+ib) \times (c+id) = (ac-bd) + i\,(ad+bc)$

ಈ ಲಬ್ಧವೂ ಒಂದು ಮಿಶ್ರಸಂಖ್ಯೆಯೇ. ಆದುದರಿಂದ, C ಎಂಬ ಗಣವು ಗುಣಾಕಾರದಲ್ಲಿ ಆವೃತವಾಗಿದೆ.

ಅನುವರ್ತ ಮಿಶ್ರ ಸಂಖ್ಯೆಗಳು

a, b ಗಳು ವಾಸ್ತವ ಸಂಖ್ಯೆಗಳಾಗಿದ್ದರೆ, $a+ib$ ಮತ್ತು $a-ib$ ಗಳನ್ನು ಅನುವರ್ತ ಮಿಶ್ರ ಸಂಖ್ಯೆಗಳೆಂದು ಕರೆಯುತ್ತೇವೆ. ಈ ತೆರನಾದ ಮಿಶ್ರಸಂಖ್ಯೆಗಳ ಜೊತೆಗಳಿಗೆ ಸಂಬಂಧಿಸಿದ ಮುಂದೆ ಕೊಟ್ಟಿರುವ ರಸವತ್ತಾದ ಫಲಿತಾಂಶಗಳನ್ನು ಗಮನಿಸೋಣ.

(1) ಎರಡು ಅನುವರ್ತ ಮಿಶ್ರ ಸಂಖ್ಯೆಗಳ ಮೊತ್ತವು ಒಂದು ವಾಸ್ತವ ಸಂಖ್ಯೆಯಾಗಿರುತ್ತದೆ.

ಏಕೆಂದರೆ, $(a+ib) + (a-ib) = a + (ib-ib) + a$
$= 2a \in R.$

(2) ಎರಡು ಅನುವರ್ತ ಮಿಶ್ರ ಸಂಖ್ಯೆಗಳ ವ್ಯತ್ಯಾಸವು ಒಂದು ಶುದ್ಧ ಊಹ್ಯ ಸಂಖ್ಯೆಯಾಗಿರುತ್ತದೆ.

ಏಕೆಂದರೆ, $(a+ib)-(a-ib) = (ib+a)-(a-ib)$
$= ib + (a-a) + ib$
$= 2ib.$ (ಇದು ಶುದ್ಧ ಊಹ್ಯ ಸಂಖ್ಯೆ)

(3) ಎರಡು ಅನುವರ್ತ ಮಿಶ್ರ ಸಂಖ್ಯೆಗಳ ಗುಣಲಬ್ಧವು ಒಂದು ವಾಸ್ತವ ಸಂಖ್ಯೆಯಾಗಿರುತ್ತದೆ.

ಏಕೆಂದರೆ, $(a+ib)\,(a-ib) = a^2-(ib)^2 = a^2 + b^2$
(ಇದು ವಾಸ್ತವ ಸಂಖ್ಯೆ)

Further, $(c+id)\ (a+ib) = (ca-db)+i(da+cb)$

$$=(ac-bd)+i\ (ad+bc)$$

$$=(a+ib)\ \times\ (c+id)$$

$\therefore$ Multiplication of complex numbers is Commutative. (1)

It is also easily verified that the associative law

$[(a+ib)\times(c+id)]\times(e+if)=(a+ib)\times[(c+id)\times$ $(e+if)]$ holds good. (2)

We have $(a+ib)(c+id)=(ac-bd)+i(ad+bc)$

Taking $c+id=1+i0=1$ we have

$$(a+ib)\ (1+io)=a+ib=(1+io)(a+ib)$$

$\therefore$ $1+io=1$ is the multiplicative identity or the unity in C (3)

(4) *Multiplicative inverse ; Division in the set of all Complex Numbers*

Let $a+ib$ be the given complex number. We want to find, when it exists, the number $x+iy$ such that

$$(a+ib)\ (x+iy)\ =\ (1+i0)\ .\ .\ .\ .\ .\ .\ .\ .\quad \text{I}$$

Or in other words, we want to find, when it exists the number $x+iy$, such that

$$\frac{1+io}{a+ib}\ =\ (x+iy)\ .\ .\ .\ .\quad \text{II}$$

Multiply both sides of I by $(a-ib)$

ಅಲ್ಲದೆ,

$$(c+id) \times (a+ib) = (ca-db) + i\,(da+cb)$$
$$= (ac-bd) + i\,(ad+bc)$$
$$= (a+ib) \times (c+id)$$

ಆದುದರಿಂದ ಮಿಶ್ರ ಸಂಖ್ಯೆಗಳ ಗುಣಾಕಾರವು ಪರಿವರ್ತನೀಯ ನಿಯಮವನ್ನನುಸರಿಸುತ್ತದೆ. (1)

ಮುಂದೆ ಕಾಣಿಸಿರುವ ಸಹವರ್ತನೀಯ ನಿಯಮವನ್ನೂ ಸುಲಭವಾಗಿ ತಾಳೆ ನೋಡಬಹುದು.

$$[\,(a+ib) \times (c+id)\,] \times (e+if) = (a+ib) \times [\,(c+id) \times (e+if)\,) \qquad (2)$$

ಈಗ $(a+ib)\,(c+id) = (ac-bd) + i\,(ad+bc)$

ಇದರಲ್ಲಿ $c+id = 1+i0 = 1$ ಎಂದು ತೆಗೆದುಕೊಂಡರೆ,

$(a+ib)\,(1+i0) = a+ib = (1+i0)\,(a+ib)$

$\therefore$ $1+i0=1$ ಎಂಬುದು C ಯಲ್ಲಿ ಗುಣಾಕಾರದ ಏಕವಾಗಿ ವ್ಯವಹರಿಸುತ್ತದೆ. (3)

(4) ಗುಣಾಕಾರದ ಅನುಲೋಮ ; ಮಿಶ್ರ ಸಂಖ್ಯೆಗಳ ಗಣದಲ್ಲಿ ಭಾಗಾಕಾರ

$a+ib$ ದತ್ತ ಮಿಶ್ರ ಸಂಖ್ಯೆಯಾಗಿರಲಿ. ಈಗ $(a+ib)\,(x+iy) = 1+i0$ (I)

ಆಗುವಂತೆ, $x+iy$ ಎಂಬ ಸಂಖ್ಯೆಯನ್ನು, ಅದು ಇದ್ದದ್ದೇ ಆದರೆ ಹೇಗೆ ಕಂಡು ಹಿಡಿಯುವುದು ?

ಅಥವಾ, ಅಂಥ ಸಂಖ್ಯೆಯೊಂದಿದ್ದರೆ,

$$\frac{1+i0}{a+ib} = x+iy \qquad \text{(II)}$$

ಆಗುವಂತೆ, $x+iy$ ಯನ್ನು ಹೇಗೆ ಕಂಡು ಹಿಡಿಯಬೇಕು ?

ಇದಕ್ಕಾಗಿ, (I) ರ ಎರಡು ಕಡೆಗಳನ್ನೂ $(a-ib)$ ಯಿಂದ ಗುಣಿಸಿರಿ.

$$\therefore (a-ib)\ (a+ib)\ (x+iy) = (a-ib)\ (1+io)$$

$$\therefore \quad (a^2+b^2)\ (x+iy) = (a-ib)$$

$\therefore$ if $a^2+b^2 \neq o$, dividing both sides by (a^2+b^2)

$$(x+iy) = \left(\frac{a}{a^2+b^2}\right) + i\left(\frac{-b}{a^2+b^2}\right)$$

This is the multiplicative inverse of $(a+ib)$, and it belongs to C.

Note :—(1) $x+iy$ exists if $a^2+b^2 \neq 0$. This just requires that one at least of a and b should be $\neq 0$. But then $a+ib \neq o$.

Thus all complex numbers. except $0+i0$ have their multiplicative inverses in C.

(2) Further, II shows that $x+iy = \dfrac{1}{a+ib}$

Hence, the familiar notation $(x+iy) = (a+ib)^{-1}$ is used, for the multiplicative inverse of $(a+ib)$.

In general. division is possible in C. whenever the divisor $\neq 0$. Let $a+ib \neq 0$ and consider

$$\frac{A+iB}{a+ib} = x+iy.$$

Multiply on both sides by $(a-ib)\ (a+ib)$

$$(A+iB)\ (a-ib) = (x+iy)\ (a^2+b^2)$$

$$\therefore \quad (Aa+Bb)+i\ (Ba-Ab) = (x+iy)\ (a^2+b^2)$$

Now $a+ib \neq 0$ $\therefore$ $a^2+b^2 \neq 0$. Dividing by (a^2+b^2) we get

$$x+iy = \frac{Aa+Bb}{a^2+b^2} + i\ \frac{Ba-Ab}{a^2+b^2} = \frac{A+iB}{a+ib}$$

$\therefore \quad (a-ib)(a+ib)(x+iy) = (a-ib)(1+i0)$

$\therefore \quad (a^2+b^2)(x+iy) = a-ib$

$\therefore \quad a^2+b^2 \neq 0$ ಆದರೆ, ಎರಡು ಕಡೆಗಳನ್ನೂ (a^2+b^2) ನಿಂದ ಭಾಗಿಸಿ.

$$\therefore \quad x+iy = \left(\frac{a}{a^2+b^2}\right) + i\left(\frac{-b}{a^2+b^2}\right)$$

ಇದೇ, $(a+ib)$ ಯ ಗುಣಾಕಾರದ ಅನುಲೋಮವಾಗಿದೆ,

ಮತ್ತು ಅದು C ಯ ಒಂದು ಗಣಾಂಶ.

ಗಮನಿಸಿ :—(1) $a^2+b^2 \neq 0$ ಆದರೆ, $x+iy$ ಇರುತ್ತದೆ.

ಇದಕ್ಕಾಗಿ a ಮತ್ತು b ಗಳೆರಡರಲ್ಲಿ ಕನಿಷ್ಠಪಕ್ಷ ಒಂದಾದರೂ $\neq 0$ ಇರಬೇಕು.

ಆದರೆ, ಆಗ $a+ib \neq 0 \;\therefore\; 0+i0$ಯನ್ನು ಹೊರತು, ಉಳಿದ ಎಲ್ಲಾ ಮಿಶ್ರ ಸಂಖ್ಯೆಗಳಿಗೂ, Cಗಣದಲ್ಲಿ ಗುಣಾಕಾರದ ಅನುಲೋಮವಿರುತ್ತದೆ.

(2) ಮೇಲಾಗಿ, (II) ರಿಂದ $x+iy = \dfrac{1}{a+ib}$ ಎಂದು ತಿಳಿದುಬರುತ್ತದೆ.

ಆದಕಾರಣ, $x+iy=(a+ib)^{-1}$ ಎಂಬ ಪರಿಚಯವಾದ ಚಿಹ್ನೆಯಿಂದ, $(a+ib)$ಯ ಗುಣಾಕಾರದ ಅನುಲೋಮವನ್ನು ತಿಳಿಸುತ್ತೇವೆ.

ಸಾಮಾನ್ಯವಾಗಿ, ಭಾಜಕವು 0 ಅಲ್ಲದ ಸಂದರ್ಭಗಳಲ್ಲೆಲ್ಲಾ, C ಗಣದಲ್ಲಿ ಭಾಗ ಹಾರವು ಸಾಧ್ಯವಾಗಿದೆ.

$a+ib \neq 0$ ಇರಲಿ. $\dfrac{A+ib}{a+ib} = x+iy$ ಎಂದು ತೆಗೆದುಕೊಳ್ಳೋಣ.

ಇದರ ಎರಡು ಕಡೆಗಳನ್ನೂ $(a-ib)(a+ib)$ ಇಂದ ಗುಣಿಸಿದರೆ,

$\therefore (A+iB)(a-ib) = (x+iy)(a^2+b^2)$

$\therefore (Aa+Bb)+i(Ba-Ab) = (x+iy)\; a^2+b^2)$

ಈಗ $a+ib \neq 0 \quad \therefore a^2+b^2 \neq 0.$ (a^2+b^2) ನಿಂದ ಭಾಗಿಸಿದರೆ,

$$x+iy = \frac{Aa+Bb}{a^2+b^2} + \text{i}\,\frac{Ba-Ab}{a^2+b^2} = \frac{A+iB}{a+ib}$$

5. *Distributive Laws of Multiplication w.r.t. addition*

The distributive laws

$(a+ib)\times[(A+iB)+(C+iD)]=(a+ib)\ (A+iB)+(a+ib$

$(C+iD)\ =\ [(A+iB)+(C+iD]\times(a+ib)$

can be easily verified by actual multiplication, anc simplification.

Exercises 2.3

I Simplify the following and write down thei conjugates.

(1) $(4-3i)\times(8+2i)+14-12i$

(2) $\{(6+2i)-(8+3i)\}\ \times\ (-5+2i)$

II Find the multiplicative inverse of each of th following, expressing them in the form $A+iB$ where A and B are real.

$(2+3i)$, $(-1-i)$, $(3-2i)$, $(1-i)$, $(2-i)$

III Express the following in the form $A+iB$ where A and B are real.

$$Z_1=\frac{1+i}{1-i}\qquad Z_2=\frac{2-3i}{2+i}\ ,\ Z_3=\frac{(1+i)^2}{(1-i)}$$

$$Z_4=\frac{2+i}{(1+i)^2}\ ,\ Z_5=\frac{2+5i}{(3+i)^2}\ .$$

IV Evaluate : $Z_1\ Z_2$, $Z_2\ Z_3$, $Z_3\ Z_4$. $Z_4\ Z_5$, $Z_5\ Z_1$, for Z_1, Z_2, Z_3, Z_4, Z_5. given in Ex. III.

V Using the notation $\overline{Z}$ for the conjugate $x-iy$ of the number $Z=x+iy$, evaluate $\overline{Z}_1\ \overline{Z}_2$. $\overline{Z}_2\ \overline{Z}_3$. $\overline{Z}_3\ \overline{Z}_4$ $\overline{Z}_4\ \overline{Z}_5$, $\overline{Z}_5\ \overline{Z}_1$.

VI Calculate :

$$\frac{\overline{Z}_1}{\overline{Z}_2}\ ,\ \frac{\overline{Z}_2}{\overline{Z}_3}\ ,\ \frac{\overline{Z}_3}{\overline{Z}_4}\ ,\ \frac{\overline{Z}_4}{\overline{Z}_5}\ ,\ \frac{\overline{Z}_5}{\overline{Z}_1}\ .$$

(5) ಸಂಕಲನ ಕ್ರಿಯೆಗೆ ಗುಣಾಕಾರದ ವಿಭಾಜಕ ನಿಯಮಗಳು

$(a+ib)\times[(A+iB)+(C+iD)]=(a+ib)\ (A+iB)$
$\quad +(a+ib)\ (C+iD)=[(A+iB)+(C+iD)]\times(a+ib)$

ಗುಣಿಸಿ, ಸುಲಭ ರೂಪಕ್ಕೆ ತರುವುದರ ಮೂಲಕ ಇವನ್ನು ಸುಲಭವಾಗಿ ಸರಿ ನೋಡಬಹುದು

ಅಭ್ಯಾಸ 2.3

I ಇವುಗಳನ್ನು ಸುಲಭ ರೂಪಕ್ಕೆ ತನ್ನಿ, ಮತ್ತು ಅವುಗಳ ಅನುವರ್ತಿಗಳನ್ನು ಬರೆಯಿರಿ.

1) $(4-3i)\times(8+2i)+14-12i$

2) $\{(6+2i)-(8+3i)\}\times(-5+2i)$

II ಇವುಗಳಲ್ಲಿ ಪ್ರತಿಯೊಂದಕ್ಕೂ ಗುಣಾಕಾರದ ಅನುಲೋಮವನ್ನು ಕಂಡುಹಿಡಿದು, ಅವನ್ನು $A+iB$, (A, B ವಾಸ್ತವ) ರೂಪದಲ್ಲಿ ವ್ಯಕ್ತ ಪಡಿಸಿರಿ.

$(2+3i)$, $(-1-i)$, $(3-2i)$, $(1-i)$, $(2-i)$.

III ಇವುಗಳನ್ನು $A+iB$, (A, B ವಾಸ್ತವ) ರೂಪದಲ್ಲಿಡಿ.

$$Z_1=\frac{1+i}{1-i},\ Z_2=\frac{2-3i}{2+i},\ Z_3=\frac{(1+i)^2}{1-i}$$

$$Z_4=\frac{2+i}{(1+i)^2},\ Z_5=\frac{2+5i}{(3+i)^2}$$

IV ಮೇಲಿನ IIIನೇ ಪ್ರಶ್ನೆಯಲ್ಲಿರುವ Z_1, Z_2, Z_3, Z_4, Z_5 ಗಳನ್ನಿಟ್ಟುಕೊಂಡು Z_1Z_2, Z_2Z_3, Z_3Z_4, Z_4Z_5, Z_5Z_1 ಗಳ ಬೆಲೆಗಳನ್ನು ಕಂಡುಹಿಡಿಯಿರಿ.

